Ph. : 08419 - 295069, 9481863850
Web. : www.uksouharda.com
E-mail : uksouharda@uksouharda.in

ಸ್ಥಾಪನೆ : 23-05-2001
ರ.ನಂ. : ಡಿ.ಆರ್.ಎನ್. /ಆರ್. ಎಸ್. ಆರ್. /2238 /12-01-2011

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : ಮಾಲತೇಶ ಆರ್ಕೇಡ್, ಬಸ್‌ಸ್ಟ್ಯಾಂಡ್ ರಸ್ತೆ,
ಯಲ್ಲಾಪುರ - 581 359 (ಉ. ಕ.)

## 21 ನೇ
## ವಾರ್ಷಿಕ ವರದಿ
ಹಾಗೂ
## ಅಢಾವೆ ಪತ್ರಿಕೆ
## 2021-22

ವಾರ್ಷಿಕ ಸರ್ವಸಾಧಾರಣ ಸಭೆ ದಿನಾಂಕ : 12-9-2022
ಸ್ಥಳ : ಅಡಿಕೆ ಭವನ, ಎ.ಪಿ.ಎಂ.ಸಿ. ಯಾರ್ಡ, ಯಲ್ಲಾಪುರ

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : ಮಾಲತೇಶ ಆರ್ಕೇಡ್, ಬಸ್‌ಸ್ಟ್ಯಾಂಡ್ ರಸ್ತೆ, ಯಲ್ಲಾಪುರ - 581 359 (ಉ. ಕ.)

## ಆಡಳಿತ ಮಂಡಳಿ

**ಶ್ರೀ ಪ್ರಮೋದ ಹೆಗಡೆ**
ಅಧ್ಯಕ್ಷರು

**ಶ್ರೀ ಸುಬ್ಬಯ್ಯ ಗಜಾನನ ಧೋಗಳೆ**
ಉಪಾಧ್ಯಕ್ಷರು

### - ನಿರ್ದೇಶಕರು -

ಶ್ರೀ ಗಜಾನನ ಶಂಕರ ಗಾಂವ್ಕರ
ಶ್ರೀ ಮಹಾಬಲೇಶ್ವರ ಮಹಾದೇವ ಹೆಗಡೆ
ಶ್ರೀ ರಮೇಶ ಸೀತಾರಾಮ ಪ್ರಸಾದ
ಶ್ರೀ ನಾರಾಯಣ ವೆಂಕಟ್ರಮಣ ಉಡದಂಗಿ
ಶ್ರೀ ಸದಾನಂದ ರಾಮಚಂದ್ರ ಭಟ್ಟ
ಶ್ರೀ ಮೆಹಬೂಬಅಲಿ ಡಿ. ಮುಲ್ಲಾ
ಶ್ರೀಮತಿ ರೇಖಾ ಮಹಾಬಲೇಶ್ವರ ಹೆಗಡೆ
ಶ್ರೀ ರವಿ ಪರಮೇಶ್ವರ ಭಟ್ಟ
ಶ್ರೀ ಗಣಪತಿ ಶಂಕರ ಭಟ್ಟ
ಶ್ರೀ ದೀಪಕ ರಾಜಾರಾಮ ಹೆಗಡೆ
ಶ್ರೀ ದೇವಣ್ಣ ಶೇಷು ಕೇಸರಕರ
ಶ್ರೀ ಭಾಸ್ಕರ ಲಕ್ಷ್ಮಣ ಸಿದ್ದಿ
ಶ್ರೀಮತಿ ರಾಜೇಶ್ವರಿ ರವಿ ಭಟ್ಟ

### -ಆಮಂತ್ರಿತ ನಿರ್ದೇಶಕರು -

ಶ್ರೀ ನಾಗೇಂದ್ರ ಅನಂತ ಭಟ್ಟ - ಬಾಹ್ಯ ತಜ್ಞರು
ಶ್ರೀ ಪ್ರಸಾದ ಪಿ. ಹೆಗಡೆ - ಬಾಹ್ಯ ತಜ್ಞರು

### - ಪ್ರಧಾನ ವ್ಯವಸ್ಥಾಪಕರು -

ಶ್ರೀ ಎನ್. ಜಿ. ಕಿರಣ

### - ಗೌರವ ಸಲಹೆಗಾರರು -

ಶ್ರೀ ಪರಮೇಶ್ವರ ಜಿ. ಹೆಗಡೆ

| ಶಾಖೆಗಳು | ದೂರವಾಣಿ ಸಂಖ್ಯೆ |
|---|---|
| ಪ್ರಧಾನ ಕಛೇರಿ | 08419-295069 |
| ಯಲ್ಲಾಪುರ | 08419-262202 |
| ಗುಳ್ಳಾಪುರ | 08419-295319 |
| ಗೋಕರ್ಣ | 08386-200396 |
| ಕುಮಟಾ | 08386-220220 |
| ಶಿರಸಿ | 08384-450052 |
| ಸಿದ್ದಾಪುರ | 8024487595 |
| ದಾಂಡೇಲಿ | 08284-230099 |
| ಹೊನ್ನಾವರ | 08387-223333 |
| ಮುಂಡಗೋಡ | 8277661210 |
| ಮಹಿಳಾ ಶಾಖೆ, ಕುಮಟಾ | 08386-299998 |

## ಸಹಕಾರಿಯ ಬ್ಯಾಂಕುಗಳು

ದಿ ಕೆ. ಡಿ. ಸಿ. ಸಿ. ಬ್ಯಾಂಕ್ ಲಿ., ಶಿರಸಿ
ವಿಕಾಸ ಅರ್ಬನ್ ಕೋ-ಆಪ್. ಬ್ಯಾಂಕ್
ಭಾರತೀಯ ಸ್ಟೇಟ್ ಬ್ಯಾಂಕ್
ಕೆನರಾ ಬ್ಯಾಂಕ್
ಐ.ಸಿ.ಐ.ಸಿ.ಐ. ಬ್ಯಾಂಕ್
ಕೊಟಕ್ ಮಹೀಂದ್ರಾ ಬ್ಯಾಂಕ್
ಐ.ಡಿ.ಬಿ.ಐ. ಬ್ಯಾಂಕ್, ಶಿರಸಿ
ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್
ಡಿ. ಬಿ. ಎಸ್. ಬ್ಯಾಂಕ್, ಕಾರವಾರ
ಬ್ಯಾಂಕ್ ಆಫ್ ಬರೋಡ

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ.,

ಯಲ್ಲಾಪುರ (ಉ. ಕ.)

## ವಾರ್ಷಿಕ ಸರ್ವಸಾಧಾರಣ ಸಭೆಯ ನೋಟೀಸು

*ಯಾವತ್ತೂ ಸದಸ್ಯರಿಗೆ ಹಾಗೂ ಅಭಿಮಾನಿಗಳಿಗೆ,*

ನಮ್ಮ ಸಹಕಾರಿ ಸಂಘದ 2021-22ನೇ ಸಾಲಿನ **"ವಾರ್ಷಿಕ ಸರ್ವಸಾಧಾರಣ ಸಭೆ"**ಯನ್ನು ದಿನಾಂಕ : **12-09-2022, ಸೋಮವಾರ** ಮಧ್ಯಾಹ್ನ **3-30** ಗಂಟೆಗೆ ಸಂಘದ ಅಧ್ಯಕ್ಷರಾದ **ಶ್ರೀ ಪ್ರಮೋದ ಹೆಗಡೆ** ಇವರ ಅಧ್ಯಕ್ಷತೆಯಲ್ಲಿ **ಯಲ್ಲಾಪುರದ ಎ. ಪಿ. ಎಂ .ಸಿ. ಅಡಿಕೆ ಭವನದಲ್ಲಿ** ಕರೆಯಲಾಗಿದೆ. ತಾವೆಲ್ಲರೂ ಸಕಾಲಕ್ಕೆ ಬರಬೇಕಾಗಿ ವಿನಂತಿ.

### *** ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪಟ್ಟಿ ***

01. ಸಭೆಗೆ ಆಗಮಿಸಿದ ಸದಸ್ಯರಿಗೆ, ಗಣ್ಯರಿಗೆ ಸ್ವಾಗತ ಹಾಗೂ ಸಭಾ ಕಾರ್ಯಕ್ರಮದ ಪ್ರಾರಂಭ.
02. ವಾರ್ಷಿಕ ಮಹಾಸಭೆಯ ವಿಷಯ ಪಟ್ಟಿ ಮಂಡನೆ.
03. 31-03-2022ಕ್ಕೆ ಮುಗಿದ 2021-22ನೇ ಸಾಲಿನ ಸಹಕಾರಿ ಸಂಘದ ಕಾರ್ಯವ್ಯವಹಾರಗಳ ಕುರಿತು ಮಂಡಿಸಿದ ವಾರ್ಷಿಕ ವರದಿ ಹಾಗೂ ಯಾವತ್ತೂ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ದೃಢೀಕರಿಸುವುದು.
04. ಸಹಕಾರಿ ಸಂಘದ 2021-22ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧಕರ ಲೆಕ್ಕ ಪರಿಶೋಧನಾ ವರದಿ ಹಾಗೂ ಅದಕ್ಕೆ ಆಡಳಿತ ಮಂಡಳಿಯವರು ಕೊಟ್ಟ ವಿವರಣೆಗಳನ್ನು ಪರಿಶೀಲಿಸಿ ದೃಢೀಕರಿಸುವುದು.
05. 2021-22ನೇ ಸಾಲಿನ ಸಹಕಾರಿ ಸಂಘದ ನಿವ್ವಳ ಲಾಭವನ್ನು ವಿಭಾಗಣೆ ಮಾಡುವುದು.
06. 2022-23ನೇ ಸಾಲಿನ ಬಗ್ಗೆ ನಿರ್ದೇಶಕ ಮಂಡಳಿಯವರು ತಯಾರಿಸಿದ ಅಂದಾಜು ಪತ್ರಿಕೆಗೆ ಅನುಮೋದನೆ ನೀಡುವುದು.
07. 2021-22ನೇ ಸಾಲಿನಲ್ಲಿ ಆ ವರ್ಷದ ಅಂದಾಜು ಪತ್ರಿಕೆಗಿಂತ ಹೆಚ್ಚಳವಾದ ಖರ್ಚುಗಳಿಗೆ ಅನುಮೋದನೆ ನೀಡುವುದು.
08. 2022-23ನೇ ಸಾಲಿನ ಬಗ್ಗೆ ಅಧಿಕೃತ ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು ಮತ್ತು ಅವರ ಸಂಭಾವನೆ ನಿಗದಿಪಡಿಸುವುದು.
09. ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಹತ್ತಿರದ ಸಂಬಂಧಿಗಳನ್ನು ನೌಕರರೆಂದು ನೇಮಕ ಮಾಡಿಕೊಂಡಿದ್ದಲ್ಲಿ ಪರಿಶೀಲಿಸುವುದು.
10. 2021-22ನೇ ಸಾಲಿನಲ್ಲಿ ಸದಸ್ಯರನ್ನಾಗಿ ನೇಮಿಸಿಕೊಂಡ ಮತ್ತು ತೆಗೆದು ಹಾಕಿದ ಅಥವಾ ಇನ್ನಿತರ ರೀತಿಯಲ್ಲಿ ಮುಕ್ತಾಯಗೊಳಿಸಿದ ಸದಸ್ಯತ್ವದ ಬಗೆಗಿನ ಸಂಕ್ಷಿಪ್ತ ವರದಿ ದೃಢೀಕರಿಸುವುದು.
11. ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ, ಅಗತ್ಯವುಳ್ಳ ವಿನಾಯಿತಿ ನೀಡುವ ಕುರಿತು.

12. ಸದಸ್ಯರಿಗೆ ಅವಶ್ಯವಿರುವ ಸಾಲಗಳ ವಿತರಣೆಯ ಪತ್ತು ನಿರ್ಣಯಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡುವ ಕುರಿತು.
13. ಸಹಕಾರಿ ಸಂಘದ ವ್ಯವಹಾರಗಳ ಅನೂಕೂಲತೆಗಾಗಿ ಹೊರಗಿನಿಂದ ಸಂಗ್ರಹಿಸಬಹುದಾದ ಠೇವು ಹಾಗೂ ಸಾಲಗಳನ್ನು ಪಡೆಯುವ ಪರಮಾವಧಿ ಮಿತಿ ನಿರ್ಧರಿಸುವುದು.
14. 2022–23ನೇ ಸಾಲಿನಲ್ಲಿ ಕೈಗೊಳ್ಳಬಹುದಾದ ಹೊಸ ಕಾರ್ಯಚಟುವಟಿಕೆಗಳ ಕುರಿತು ನಿರ್ಣಯಿಸುವುದು.
15. ಕಾಲಕಾಲಕ್ಕೆ ಅವಶ್ಯವುಳ್ಳಂತೆ ಒಳ ನಿಯಮಾವಳಿಗಳನ್ನು ರಚಿಸಿಕೊಳ್ಳಲು, ತಿದ್ದುಪಡಿ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡುವ ಕುರಿತು ಹಾಗೂ 2021–22ನೇ ಸಾಲಿನಲ್ಲಿ ಆಡಳಿತ ಮಂಡಳಿಯು ರಚಿಸಿಕೊಂಡ ಒಳನಿಯಮಾವಳಿಗಳು ಹಾಗೂ ತಿದ್ದುಪಡಿಗಳನ್ನು ಮಂಜೂರು ಮಾಡಿದ್ದನ್ನು ದೃಢೀಕರಿಸುವುದು.
16. ಸದಸ್ಯರಿಗೆ ಬಡ್ಡಿ ಹಾಗೂ ದಂಡದ ಬಡ್ಡಿ ತುಂಬುವಲ್ಲಿ ರಿಯಾಯತಿ ನೀಡಿದ ಕುರಿತು ಅನುಮೋದಿಸುವುದು.
17. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.
18. 2021–22ನೇ ಸಾಲಿನಲ್ಲಿ ನೇಮಕಗೊಂಡ ಸಿಬ್ಬಂದಿಗಳ ಯಾದಿಯನ್ನು ದೃಢೀಕರಿಸುವದು.
19. ಸಹಕಾರಿ ಸಂಘದ ಹೆಸರಿನಲ್ಲಿರುವ ಸ್ಥಿರಾಸ್ತಿ ಮಾರಾಟ ಮತ್ತು ಹೊಸ ಸ್ಥಿರಾಸ್ತಿ ಖರೀದಿಸಿದ್ದನ್ನು ದೃಢೀಕರಿಸುವದು.
20. ಕಾರ್ಯಾಚರಣೆ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
21. ಪಿ. ಎಂ. ಸಿ. ಬ್ಯಾಂಕ್ ( ಯುನಿಟಿ ಸ್ಮಾಲ್ ಫೈನಾನ್ಸ ಬ್ಯಾಂಕ್) ನಲ್ಲಿನ ನಮ್ಮ ಸಂಘದ ಠೇವು ಕುರಿತು ಕೈಗೊಂಡ ಕ್ರಮವನ್ನು ದೃಢೀಕರಿಸುವುದು.
22. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
23. ಒಟ್ಟುಗೂಡುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ಕುರಿತು.
24. ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.
25. ಆಡಳಿತ ಮಂಡಳಿಯಲ್ಲಿನ ನಿರ್ದೇಶಕರುಗಳನ್ನು ತೆಗೆದುಹಾಕುವುದು.
26. 37ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
27. ಸಹಕಾರಿ ಸಂಘವು ಇತರ ಸಹಕಾರಿ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.
28. 14, 15, ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.
29. ಮಂಡಳಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
30. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
31. ಸಹಕಾರಿಯ ಸಮಾಪನ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
32. ಅಧ್ಯಕ್ಷರ ಅನುಮತಿಯೊಂದಿಗೆ ಚರ್ಚಿಸಬಹುದಾದ ಇತರ ವಿಷಯಗಳು.
33. ಮಹಾಸಭೆಯಿಂದ ಅನುಮೋದಿಸಲ್ಪಟ್ಟ ಎಲ್ಲ ನಿರ್ಣಯಗಳನ್ನು ಓದಿ ದಾಖಲಿಸುವುದು.

ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ,

ಸ್ಥಳ : ಯಲ್ಲಾಪುರ

**ಎನ್. ಜಿ. ಕಿರಣ**

ದಿನಾಂಕ : 10–08–2022

ಪ್ರಧಾನ ವ್ಯವಸ್ಥಾಪಕರು

## ಮಹತ್ವದ ಸೂಚನೆಗಳು :

01. ಕರ್ನಾಟಕ ಸೌಹಾರ್ದ ಕಾಯ್ದೆಯನ್ವಯ ಮಹಾಸಭೆಗೆ ಹಾಜರಾಗುವುದು ಹಾಗೂ ಸಹಕಾರಿ ಸಂಘದ ಬೈಲಾದಲ್ಲಿ ಸೂಚಿಸಿದ ಕನಿಷ್ಠ ವ್ಯವಹಾರ ಮಾಡುವುದು ಕಡ್ಡಾಯವಾಗಿದ್ದು, ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದೇ ಹೋದಲ್ಲಿ ಅಥವಾ ಬೈಲಾ ಪ್ರಕಾರ ಕನಿಷ್ಠ ವ್ಯವಹಾರ ಮಾಡದೇ ಹೋದಲ್ಲಿ ಸಹಕಾರಿ ಸಂಘದ ಸದಸ್ಯತ್ವದ ಅಧಿಕಾರ ಚಲಾಯಿಸಲು, ಮತದಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

02. ಡಿವಿಡೆಂಡ ಪಡೆಯದೇ ಇದ್ದವರು ಡಿವಿಡೆಂಡ ಒಯ್ಯಬೇಕು. ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಯ ಡಿವಿಡೆಂಡ ಒಯ್ಯದೇ ಹೋದಲ್ಲಿ ಅಂತಹ ಮೊತ್ತವನ್ನು ಸಹಕಾರಿಯ ರಿಸರ್ವಫಂಡಿಗೆ ವರ್ಗಾಯಿಸಲಾಗುವುದು.

03. ಸಹಕಾರಿ ಸಂಘದ 2021–22ನೇ ಸಾಲಿನ ವಾರ್ಷಿಕ ವರದಿ ಮತ್ತು ಅಥಾವೆ ಪತ್ರಿಕೆಗಳು ಪ್ರಧಾನ ಕಛೇರಿಯಲ್ಲಿ ಲಭ್ಯವಿರುತ್ತದೆ.

04. ಶೇರು ಸರ್ಟಿಫಿಕೇಟ ಪಡೆಯದೇ ಇದ್ದವರು ಮತ್ತು ಶೇರು ಖಾತೆಗೆ ನಾಮಿನಿ ಮಾಡದೇ ಇದ್ದವರು ಸರ್ಟಿಫಿಕೇಟ್ ಒಯ್ಯಬೇಕು ಹಾಗೂ ನಾಮಿನಿ ದಾಖಲಿಸಬೇಕು.

05. ಸಹಕಾರಿ ಸಂಘದ ಸದಸ್ಯತ್ವ ಗುರುತಿನ ಚೀಟಿ ಪಡೆಯುವುದು ಕಡ್ಡಾಯವಿದ್ದು ಪಡೆಯಲು ವಿನಂತಿಸಿದೆ. ಹಾಗೂ ಗುರುತಿನ ಚೀಟಿ ಹೊಂದದೇ ಹೋದಲ್ಲಿ ಯಾವುದೇ ರೀತಿಯ ಮತದಾನದಲ್ಲಿ ಭಾಗವಹಿಸಲಿಕ್ಕೆ ಅವಕಾಶವಿರುವುದಿಲ್ಲ.



# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ.,

ಯಲ್ಲಾಪುರ (ಉ. ಕ.)

## 2021-22 ನೇ ಸಾಲಿನ

# ವಾರ್ಷಿಕ ವರದಿ

ಪ್ರಿಯ ಸಹಕಾರಿಗಳೇ,

ನಿಮ್ಮ ಸಹಕಾರಿ ಸಂಘದ 31-03-2022ಕ್ಕೆ ಮುಗಿದ **21**ನೇ ವರ್ಷದ ವ್ಯವಹಾರಗಳ ಸಂಕ್ಷಿಪ್ತ ಸಿಂಹಾಲೋಕನ ಹಾಗೂ ದೃಢೀಕೃತ ಲೆಕ್ಕಪತ್ರಗಳನ್ನು ಒಳಗೊಂಡ **ವಾರ್ಷಿಕ ವರದಿ**ಯನ್ನು ತಮ್ಮೆಲ್ಲರ ಮುಂದೆ ಸಾದರಪಡಿಸಲು ಹರ್ಷಿಸುತ್ತೇನೆ.

ಸಹಕಾರಿ ಸಂಘವು ತನ್ನ ದೈನಂದಿನ ವ್ಯವಹಾರಗಳ ಜೊತೆಗೆ ಹೊಸ ಹೊಸ ಆಲೋಚನೆಗಳನ್ನು ಪ್ರಸ್ತುತಪಡಿಸುವಲ್ಲಿ ಮತ್ತು ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಆಡಳಿತ ಮಂಡಳಿಯ ನಿರ್ದೇಶಕರು ತಮ್ಮ ಸಂಪೂರ್ಣ ಸಮಯ ಹಾಗೂ ಅನುಭವಗಳನ್ನು ನೀಡುತ್ತಾ ಬಂದಿದ್ದಕ್ಕೆ ಅಭಿನಂದಿಸುತ್ತಾ ಹಿಂದಿನ ವರ್ಷದ ಒಟ್ಟಾರೆ ವ್ಯವಹಾರಗಳ ವಿಮರ್ಶೆ ಪ್ರಸ್ತುತ ವರ್ಷದ ಕೈಗೊಳ್ಳಬೇಕಾದ ಕಾರ್ಯ ಚಟುವಟಿಕೆಗಳು ಸಮಗ್ರ ವಿಶ್ಲೇಷಣೆ ಹಾಗೂ ಮುಂದಿನ ವರ್ಷದ ಪ್ರಗತಿಯ ಮುನ್ನೋಟಕ್ಕೆ ಈ ವರದಿಯನ್ನು ಸಾದರಪಡಿಸಿದೆ.

## ವರದಿಯ ವರ್ಷ ಕೈಗೊಂಡ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರಣೆಗಳು :

ಪ್ರಧಾನ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ನೀಡಿದ ಸಾಲಗಳ ಪೈಕಿ ಬಾಕಿ ಇದ್ದ ಸಾಲ, ಠೇವಣಿಗಳಲ್ಲಾದ ಹೆಚ್ಚಳ ಇವುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಶಾಖೆಗಳು | ಬಾಕಿ ಇದ್ದ ಸಾಲಗಳು (ವರ್ಷಾಂತ್ಯಕ್ಕೆ ಇದ್ದಂತೆ) | | ಠೇವಣಿ ಸಂಗ್ರಹಣೆ (ವರ್ಷಾಂತ್ಯಕ್ಕೆ ಇದ್ದಂತೆ) | | ಗಳಿಸಿದ ಲಾಭ |
|---|---|---|---|---|---|
| | | ಶೇ. ಹೆಚ್ಚಳ | | ಶೇ. ಹೆಚ್ಚಳ | |
| ಪ್ರಧಾನ ಕಛೇರಿ | 25.62 | 7.85 | 16.64 | 15.14 | -179.63 |
| ಯಲ್ಲಾಪುರ | 2892.52 | 0.76 | 4065.83 | 4.34 | 145.84 |
| ಗುಳ್ಳಾಪುರ | 156.75 | 5.17 | 954.60 | 7.05 | 12.67 |
| ಗೋಕರ್ಣ | 386.54 | 1.24 | 787.21 | 8.36 | 14.61 |
| ಕುಮಟಾ | 1151.20 | 19.21 | 980.29 | -4.28 | 1.61 |
| ಶಿರಸಿ | 1065.65 | -16.12 | 1259.45 | 2.38 | 13.67 |
| ಸಿದ್ದಾಪುರ | 144.62 | 1.94 | 1020.07 | 44.08 | 9.88 |
| ದಾಂಡೇಲಿ | 666.10 | 21.27 | 222.38 | -43.28 | 36.93 |
| ಹೊನ್ನಾವರ | 928.31 | 22.29 | 573.15 | 0.08 | 21.29 |
| ಮುಂಡಗೋಡ | 270.86 | 48.58 | 232.24 | 11.06 | 0.41 |
| ಮಹಿಳಾ ಶಾಖೆ, ಕುಮಟಾ | 0.53 | 100.00 | 167.35 | 100.00 | -5.07 |
| ಒಂಟ್ಟೂ.. | **7688.70** | | **10279.21** | | **72.21** |

ಈ ಪ್ರಕಾರ ಸಾಲ ಮತ್ತು ಠೇವಣಿಗಳ ವಿವರಗಳು ಇರುತ್ತಿದ್ದು, ವರದಿಯ ವರ್ಷ ರೂ. 72.21 ಲಕ್ಷ ಲಾಭ ಗಳಿಸಿದೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡ ವಿವರಣೆಗಳನ್ನು ಸಾದರಪಡಿಸುತ್ತಾ 2021–22ನೇ ಸಾಲಿನ ಸಹಕಾರಿ ಸಂಘದ ಎಲ್ಲಾ ವ್ಯವಹಾರಗಳ ಪರಿಶೋಧಿತ ಲೆಕ್ಕಪತ್ರದೊಂದಿಗೆ ತಮ್ಮ ಮುಂದೆ ಇಡುತ್ತಾ ಇದ್ದೇವೆ.

## ಸದಸ್ಯತ್ವ :

ಸಹಕಾರಿ ಸಂಘದ ಸದಸ್ಯತ್ವದಲ್ಲಿ ವರ್ಷ ಆರಂಭದಲ್ಲಿ 15,122 'ಅ' ವರ್ಗದ ಸದಸ್ಯರು ಇದ್ದು, ವರದಿಯ ವರ್ಷದಲ್ಲಿ 'ಅ' ವರ್ಗದ ಸದಸ್ಯರಾಗಿ 1,838 ಜನ ಸದಸ್ಯತ್ವ ಪಡೆದಿದ್ದು, 125 ಜನ ಸದಸ್ಯರು ಸದಸ್ಯತ್ವದಿಂದ ಕಡಿಮೆಗೊಂಡಿರುತ್ತಾರೆ. ಮತ್ತು ವರ್ಷಾಂತ್ಯಕ್ಕೆ 16,835 'ಅ' ವರ್ಗದ ಸದಸ್ಯರನ್ನು ಸಹಕಾರಿ ಸಂಘವು ಹೊಂದಿರುತ್ತದೆ.

## ಶೇರು ಬಂಡವಾಳ :

ವರ್ಷದ ಆರಂಭದಲ್ಲಿ ಸದಸ್ಯರ ಶೇರು ಹಣ ರೂ. 549.76 ಲಕ್ಷ ಇರುತ್ತಿದ್ದು, ವರದಿಯ ವರ್ಷದಲ್ಲಿ ರೂ. 90.71 ಲಕ್ಷ ಜಮಾ ಆಗಿ ಮರು ಪಾವತಿ ಮಾಡಿದ ಶೇರು ರೂ. 72.88 ಲಕ್ಷ ಆಗಿರುತ್ತದೆ. ವರ್ಷಾಂತ್ಯಕ್ಕೆ ರೂ. 567.59 ಲಕ್ಷ ಶೇರು ಬಂಡವಾಳ ಇದ್ದು, ವರ್ಷದಲ್ಲಿ ಶೇರಿನ ಹೆಚ್ಚಳ ಶೇಕಡಾ 4.23 ಆಗಿರುತ್ತದೆ

## ನಿಧಿಗಳು :

ವರ್ಷದ ಆರಂಭಕ್ಕೆ ಒಟ್ಟು ನಿಧಿಗಳು ರೂ. 646.79 ಲಕ್ಷದಷ್ಟು ಇದ್ದು, ವರದಿಯ ವರ್ಷ ಲಾಭ ವಿಭಾಗಣೆ ಹಾಗೂ ಇತರೇ ಮೂಲಗಳಿಂದ ಒಟ್ಟು ರೂ. 149.85 ಲಕ್ಷ ಜಮಾ ಆಗಿರುತ್ತದೆ. ವರ್ಷದಲ್ಲಿ ರೂ. 4.59 ಲಕ್ಷದಷ್ಟು ವಿನಿಯೋಗಿಸಲ್ಪಟ್ಟಿದ್ದು, ವರ್ಷಾಂತ್ಯಕ್ಕೆ ರೂ. 792.05 ಲಕ್ಷದಷ್ಟು ನಿಧಿಗಳು ಇರುತ್ತದೆ. ಮತ್ತು ನಿಧಿಗಳನ್ನು ಕಾಯ್ದೆ ಅನ್ವಯ ಸೂಕ್ತ ಉದ್ದೇಶಕ್ಕೆ ಬಳಸಲಾಗಿದ್ದು, ಮಹಾಸಭೆಯ ಅನುಮೋದನೆಯನ್ನು ಬಯಸುತ್ತೇವೆ.

ಒಟ್ಟು ನಿಧಿಗಳಲ್ಲಿ ಕಾಯ್ದಿಟ್ಟ ನಿಧಿ ಸಾಮಾನ್ಯ ಕ್ಷೇಮ ನಿಧಿ, ಅನಿರೀಕ್ಷಿತ ನಷ್ಟ ನಿಧಿ ಇವುಗಳನ್ನು ಪ್ರತ್ಯೇಕವಾಗಿ ಗುಂತಾಯಿಸಲ್ಪಟ್ಟಿದ್ದು, ಕರಡು ಸಾಲದ ನಿಧಿಗಾಗಿ ರೂ. 417.49 ಲಕ್ಷ ಪ್ರತ್ಯೇಕವಾಗಿ ತೆಗೆದಿರಿಸಲಾಗಿದೆ. ಇದರಿಂದ ಸಂಸ್ಥೆಯ ಆರ್ಥಿಕ ಹೊಣೆಗಾರಿಕೆಯನ್ನು ನಿಭಾಯಿಸಲು ಹೆಚ್ಚಿನ ಆತ್ಮ ವಿಶ್ವಾಸ ಹೊಂದಿರುತ್ತದೆ.

## ಠೇವುಗಳು :

ನಮ್ಮ ಸಹಕಾರಿ ಸಂಘದಲ್ಲಿ ತಮ್ಮ ಸದಸ್ಯರಿಂದಲೇ ಸಂಗ್ರಹಿಸಲ್ಪಟ್ಟ ಎಲ್ಲಾ ರೀತಿಯ ಠೇವುಗಳು ಸೇರಿ ವರ್ಷದ ಆರಂಭದಲ್ಲಿದ್ದ ರೂ. 94.32 ಕೋಟಿಗಳಿದ್ದು, ವರದಿ ವರ್ಷದ ಅಂತ್ಯಕ್ಕೆ ಒಟ್ಟು ಠೇವುಗಳ ಮೊತ್ತ ರೂ. 102.79 ಕೋಟಿಯಷ್ಟು ಆಗಿರುತ್ತದೆ. ವರ್ಷದಲ್ಲಿ ಠೇವುಗಳಲ್ಲಿ ಶೇಕಡಾ 8.98 ಹೆಚ್ಚಳ ಆಗಿರುತ್ತದೆ. ವಾರ್ಷಿಕ ಗುರಿ ಸಾಧನೆಗಾಗಿ ಮುಂದಿನ ದಿನಗಳಲ್ಲಿ ಹೊಸ ಹೊಸ ಠೇವು ಯೋಜನೆಗಳ ಮೂಲಕ ಮತ್ತು ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಮೂಲಕ 2022–23ನೇ ಸಾಲಿನ ಕ್ರಿಯಾ ಯೋಜನೆಯಂತೆ ಗುರಿ ತಲುಪಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ

## ಕೊಡತಕ್ಕ ಸಾಲಗಳು :

ವರದಿಯ ವರ್ಷಾಂತ್ಯಕ್ಕೆ ಜಿಲ್ಲಾ ಮಧ್ಯವರ್ತಿ ಬ್ಯಾಂಕು ಮತ್ತು ವಿಕಾಸ ಅರ್ಬನ್ ಕೋ–ಆಪ್ ಬ್ಯಾಂಕು ಯಲ್ಲಾಪುರ ಸೇರಿ ರೂ. 65.00 ಕೊಡತಕ್ಕ ಸಾಲ ಇದ್ದು, ಇದರಲ್ಲಿ ವರ್ಷಾಂತ್ಯದ ವ್ಯವಹಾರದಲ್ಲಿ ಮಾತ್ರ ಬಾಕಿ ಇರುವುದು ಕಾಣಿಸುತ್ತಿದ್ದು,

ವಿಕಾಸ ಅರ್ಬನ್ ಕೋ-ಆಪ್ ಬ್ಯಾಂಕು ಯಲ್ಲಾಪುರದಲ್ಲಿ ತಾತ್ಕಾಲಿಕ ವ್ಯವಸ್ಥೆಗಾಗಿ ಠೇವಣಿ ಆಧಾರಿತವಾಗಿ ಒಡಿಡಿಎಲ್ ಸಾಲವೆಂದು ರೂ. 5 ಕೋಟಿಯ ಮಿತಿ ಹೊಂದಿದ್ದು ಇರುತ್ತದೆ. ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ರೂ. 4.50 ಕೋಟಿ ವ್ಯವಹಾರಿಕ ಸಾಲದ ಮಿತಿಯನ್ನು ಹೊಂದಿದ್ದು ಇದನ್ನು ನಾವು ಉಪಯೋಗಿಸಿದ್ದು ಇರುವುದಿಲ್ಲ.

## ಇತರ ಕೊಡತಕ್ಕ ಬಾಬ್ತುಗಳು :

ವರ್ಷಾಂತ್ಯಕ್ಕೆ ಅಥಾವೆ ಪ್ರಕಾರ ರೂ. 172.99 ಲಕ್ಷದಷ್ಟು ಕೊಡತಕ್ಕ ಬಾಬ್ತುಗಳಲ್ಲಿ ಇರುತ್ತಿದ್ದು, ಇದರಲ್ಲಿ ಸದಸ್ಯರ ಠೇವುಗಳ ಮೇಲೆ ಕೊಡಬೇಕಾದ ಬಡ್ಡಿ ಹಾಗೂ ಇತ್ಯಾದಿ ಕಾನೂನುಬದ್ಧವಾಗಿ ಕಲ್ಪಿಸಬೇಕಾದ ಅನುವುಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಕೊಡಬೇಕಾದ ಮೊತ್ತಗಳನ್ನು ತೆಗೆದಿರಿಸಲಾಗಿದೆ.

## ನಗದು ಶಿಲ್ಕು :

31-03-2022ಕ್ಕೆ ಇದ್ದಂತೆ ವರ್ಷಾಂತ್ಯದ ದಿನದಂದು ನಗದು ಶಿಲ್ಕು ರೂ. 61,30,439-50 ಇರುತ್ತಿದ್ದು, ಬೇರೆ ಬೇರೆ ಬ್ಯಾಂಕುಗಳ ಚಾಲ್ತಿ ಖಾತೆಗಳಲ್ಲಿ ಒಟ್ಟು ರೂ. 1,31,57,242-10 ಶಿಲ್ಕು ಇರುತ್ತದೆ. ಶಾಖೆಗಳ ನಗದು ಶಿಲ್ಕುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಅಧ್ಯಕ್ಷರು ಕಾಲ ಕಾಲಕ್ಕೆ ಅನಿರಿಕ್ಷೀತ ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದು, ಯಾವುದೇ ನ್ಯೂನ್ಯತೆ ಇರುವುದಿಲ್ಲ.

## ಗುಂತಾವಣೆ :

ಸಹಕಾರಿ ಸಂಘವು ಹೆಚ್ಚುವರಿ ಮೊತ್ತವನ್ನು ಅನುಸೂಚಿತ ಬ್ಯಾಂಕುಗಳಲ್ಲಿಯೇ ಗುಂತಾಯಿಸುವ ಪದ್ಧತಿ ಇಟ್ಟುಕೊಂಡಿದ್ದು, ಕಾನೂನುಬದ್ಧವಾಗಿ ಇಡಬೇಕಾದ ಕಾಯ್ದಿಟ್ಟ ನಿಧಿ ರೂ. 1,22,26,074-00 ಕೆಡಿಸಿಸಿ ಬ್ಯಾಂಕಿನಲ್ಲಿ ಗುಂತಾಯಿಸಲಟ್ಟಿರುತ್ತದೆ. ಅದರಂತೆ ಲೆಕ್ಕ ಪರಿಶೋಧಕರ ಶಿಫಾರಸ್ಸಿನಂತೆ ಸಾಮಾನ್ಯ ಕ್ಷೇಮ ನಿಧಿ ರೂ. 11,56,449-00 ನೌಕರರ ಕ್ಷೇಮನಿಧಿ ರೂ. 21,95,422-00 ಹಾಗೂ ಅನಿರೀಕ್ಷಿತ ನಷ್ಟ ನಿಧಿ ರೂ. 1,02,43,471-00ಗಳನ್ನು ಸಹ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ಗುಂತಾಯಿಸಲ್ಪಟ್ಟಿದೆ. ಇನ್ನುಳಿದಂತೆ ಕೆಡಿಸಿಸಿ ಬ್ಯಾಂಕ್, ವಿಕಾಸ ಅರ್ಬನ್ ಬ್ಯಾಂಕ್, ಪಿಎಂಸಿ ಬ್ಯಾಂಕ್ ಹಾಗೂ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಇವುಗಳಲ್ಲೆಲ್ಲಾ ಸೇರಿ ರೂ. 34,55,63,280-00 ಗುಂತಾಯಿಸಲಾಗಿದ್ದು, ಠೇವಿನ ಶೇಕಡಾ 20 ದೃವ್ಯಾಸ್ಥಿಯ ಬಗ್ಗೆ ರೂ. 20 ಕೋಟಿ 56 ಲಕ್ಷ ಹೊರತಾಗಿ ಉಳಿದಂತೆ ರೂ. 14.00 ಕೋಟಿಯಷ್ಟು ಹೆಚ್ಚುವರಿ ಮೊತ್ತವನ್ನು ಮೇಲ್ಕಂಡ ಬ್ಯಾಂಕುಗಳಲ್ಲಿ ಗುಂತಾಯಿಸಲಾಗಿದೆ.

## ಆಸ್ತಿಗಳು :

ಸಹಕಾರಿ ಸಂಘದ ವರ್ಷಾಂತ್ಯದ ಒಟ್ಟು ಆಸ್ತಿಗಳ ಮೌಲ್ಯ 173.58 ಲಕ್ಷಗಳಷ್ಟಿದ್ದು, ಅದರಲ್ಲಿ ಯಲ್ಲಾಪುರದ ಕಟ್ಟಡ ಮತ್ತು ಜಮೀನಿನ ಮೌಲ್ಯ ರೂ. 141.95 ಲಕ್ಷ ಒಳಗೊಂಡಿರುತ್ತದೆ. ಕಂಪ್ಯೂಟರ್ ಫಿಟಿಂಗ್ಸ್, ವಾಹನ ಇತ್ಯಾದಿ ಎಲ್ಲಾ ವಸ್ತುಗಳ ಮೇಲೆ ನಿಗದಿತ ಮಾನದಂಡದಂತೆ ಸವಕಳಿ ಕಳೆದಿದ್ದು, ಮಾರುಕಟ್ಟೆಯ ಮೌಲ್ಯ ಈ ಮೊತ್ತಕ್ಕಿಂತ ಎಷ್ಟೋ ಹೆಚ್ಚಿಗೆ ಇರುತ್ತದೆ.

## ಸಾಲಗಳ ವ್ಯವಹಾರಗಳು :

ಸದಸ್ಯರ ಸಾಲದ ವಾರ್ಷಿಕ ವ್ಯವಹಾರ ಈ ಕೆಳಗೆ ಕಾಣಿಸಿದ ಪ್ರಕಾರ ಇರುತ್ತದೆ. (ರೂ. ಲಕ್ಷಗಳಲ್ಲಿ)

| ಸಾಲಗಳು | 31-03-2021 ಕ್ಕೆ ಇದ್ದಂತೆ | | ವರ್ಷದಲ್ಲಿ ನೀಡಿದ್ದು | ವರ್ಷದಲ್ಲಿ ಜಮಾ | 31-03-2022 ಕ್ಕೆ ಇದ್ದಂತೆ | | 31-03-2022 ಕ್ಕೆ ಇದ್ದಂತೆ ಕಟಬಾಕಿ | |
|---|---|---|---|---|---|---|---|---|
| | ಸಂಖ್ಯೆ | ರಕಂ | | | ಸಂಖ್ಯೆ | ರಕಂ | ಸಂಖ್ಯೆ | ರಕಂ |
| ವಾಹನ ಸಾಲ | 837 | 549.35 | 340.37 | 311.11 | 775 | 578.61 | 189 | 36.89 |
| ಜಾಮೀನು ಸಾಲ | 712 | 149.90 | 102.58 | 103.22 | 680 | 149.26 | 178 | 28.51 |
| ಕ್ಯಾಶ್ ಕ್ರೆಡಿಟ್ ಸಾಲ | 75 | 1573.89 | 3117.18 | 2682.98 | 78 | 2008.09 | 12 | 157.95 |
| ಅವಧಿ ಸಾಲ | 915 | 2617.84 | 1371.66 | 1463.29 | 916 | 2526.21 | 357 | 354.99 |
| ಗೃಹ ನಿವೇಶನ ಸಾಲ | 27 | 514.84 | 169.73 | 97.09 | 25 | 587.48 | 5 | 29.72 |
| ಠೇವು ಸಾಲ | 243 | 256.74 | 995.47 | 1010.41 | 229 | 241.80 | – | – |
| ಬಂಗಾರ ದಾಗೀನು ಸಾಲ | 415 | 165.13 | 388.65 | 293.95 | 569 | 259.83 | 4 | 03.16 |
| ಓ.ಡಿ.ಡಿ.ಎಲ್. ಸಾಲ | 38 | 136.92 | 649.12 | 615.59 | 38 | 170.45 | – | – |
| ಸಿಬ್ಬಂದಿ ಸಾಲ | 19 | 23.61 | 14.95 | 12.94 | 25 | 25.62 | – | – |
| ಅಡಮಾನ ಸಾಲ | 32 | 1130.74 | 539.76 | 529.15 | 36 | 1141.35 | 10 | 137.77 |
| **ಅಂತೂ...** | **3313** | **7118.96** | **7689.47** | **7119.73** | **3371** | **7688.70** | **755** | **749.02** |

ಈ ಪ್ರಕಾರ ವರ್ಷದ ಸಾಲಗಳ ವ್ಯವಹಾರಗಳು ಇರುತ್ತಿದ್ದು, ಸಹಕಾರಿ ಸಂಘದ ಮುಖ್ಯ ಉದ್ದೇಶವೇ ಸಾಲ ನೀಡಿಕೆಯಾದ ಕಾರಣ ಉತ್ತಮ ಸಾಲಗಾರ ಸದಸ್ಯರು ಹಾಗೂ ಪ್ರಾಮಾಣಿಕತೆಯಿಂದ ಸಾಲದ ಮರು ಪಾವತಿ ಮಾಡಿದ್ದಲ್ಲಿ ಮಾತ್ರ ಸಹಕಾರಿ ಸಂಘದ ಪ್ರಗತಿಗೆ ಮೂಲ ಕಾರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಡೆದ ಸಾಲವು ಸಕಾಲದಲ್ಲಿ ತೀರಿಸುವುದಲ್ಲದೇ ಹೊಸ ಹೊಸ ಸಾಲ ಪಡೆದು ತಮ್ಮ ಆರ್ಥಿಕ ಅಭಿವೃದ್ಧಿ ಸಾಧಿಸಿಕೊಳ್ಳಲು ಸಾಲಗಾರ ಸದಸ್ಯರಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

ವರದಿಯ ವರ್ಷ ಸಾಲದ ವ್ಯವಹಾರದಲ್ಲಿ ಒಟ್ಟು 3,371 ಸದಸ್ಯರಿಂದ ರೂ. 76.89 ಕೋಟಿಯಷ್ಟು ಬರತಕ್ಕ ಸಾಲವಾಗಿದ್ದು, ಇದರಲ್ಲಿ 755 ಜನರಿಂದ ರೂ. 749.02 ಲಕ್ಷ ಕಟಬಾಕಿ ಸಾಲ ಆಗಿರುತ್ತದೆ. ಮಿತವಾದ ಆರ್ಥಿಕ ಹಿನ್ನೆಲೆಯುಳ್ಳ ನಮ್ಮ ಸಂಸ್ಥೆಗೆ ಈ ಕಟಬಾಕಿ ಪ್ರಮಾಣವು ದೊಡ್ಡ ಹೊರೆಯೇ ಆಗುತ್ತದೆ. ಕಟಬಾಕಿ ಸಾಲದ ಶೇಕಡಾ ಪ್ರಮಾಣವು ಸಾಲಗಳ ಬಾಕಿಯ ಮೇಲೆ ಶೇಕಡಾ 9.74 ಗಳಷ್ಟು ಆಗುತ್ತಿದ್ದು, ವಸೂಲಾತಿಯ ಪ್ರಮಾಣ ಶೇಕಡಾ 90.26 ರಷ್ಟು ಆಗಿರುತ್ತದೆ.

**ಕಟ್ಟಬಾಕಿ ಸಾಲಗಳ ಮೇಲೆ ಕೈಗೊಂಡ ಕ್ರಮಗಳ ವಿವರ : ((ರೂ. ಲಕ್ಷಗಳಲ್ಲಿ)**

| ಕೈಗೊಂಡ ಕ್ರಮ | ಸಂಖ್ಯೆ | ರಕಂ |
|---|---|---|
| ಅಮಲಜಾರಿಯಲ್ಲಿ | 97 | 134.95 |
| ಪಂಚಾಯತ ದಾವಾದಲ್ಲಿ | 32 | 166.78 |
| ಚೆಕ್‌ಬೌನ್ಸ | 2 | 0.38 |

| ಕೈಗೊಂಡ ಕ್ರಮ | ಸಂಖ್ಯೆ | ರಕಂ |
|---|---|---|
| ನೋಟೀಸು ಕೊಟ್ಟಿದ್ದು | 477 | 397.93 |
| ನೋಟೀಸು ಕೊಡಬೇಕಾಗಿದ್ದು | 147 | 48.98 |
| **ಅಂತೂ...** | **755** | **749.02** |

ಈ ಪ್ರಕಾರ ಕಟಬಾಕಿ ಸಾಲಗಳು ಇರುತ್ತಿದ್ದು, ಸಂಯುಕ್ತ ಸಹಕಾರಿಯ ನ್ಯಾಯಾಲಯದಲ್ಲಿ ದಾವಾ ಪ್ರಕರಣ ದಾಖಲಿಸುವ ಪ್ರಕ್ರಿಯೆಯಿಂದ ವಸೂಲಾತಿಯ ಕ್ರಮ ತೀವ್ರವಾಗಿ ಆಗುತ್ತಲಿದೆ. ಆದರೆ ನಾವು ಸಾಲಗಾರ ಸದಸ್ಯರನ್ನು ಸಾಧ್ಯವಾದಷ್ಟು ಮನವೊಲಿಸಿ ಸಾಲದ ಮರುಪಾವತಿಗಾಗಿ ಪ್ರಯತ್ನಿಸುತ್ತಾ ಇದ್ದು, ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಕಾನೂನು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾಲ ಪಡೆದ ಸದಸ್ಯರು ನಮ್ಮೊಂದಿಗೆ ಸ್ನೇಹಮಯ ವಾತಾವರಣದಲ್ಲಿ ಸಾಲ ತೀರಿಸುವ ಪ್ರಕ್ರಿಯೆಗಳಿಗೆ ಅವಕಾಶ ನೀಡಿದಲ್ಲಿ ಪರಸ್ಪರ ಪ್ರಗತಿಗೆ ಸಹಾಯಕವಾಗಬಹುದೆಂದು ನಂಬಿರುತ್ತೇವೆ.

## ಅನುತ್ಪಾದಕ ಆಸ್ತಿಯ ಪ್ರಮಾಣ (ಎನ್. ಪಿ. ಎ.) :

ವರದಿಯ ವರ್ಷ ಸಹಕಾರಿ ಸಂಘದ ಎನ್. ಪಿ. ಎ. ಪ್ರಮಾಣವು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಗೆ ಆಗಿರುತ್ತಿದ್ದು, ಬರತಕ್ಕ ಸಾಲಗಳ ಮೇಲೆ ಭಾರತಿಯ ರಿಸರ್ವ ಬ್ಯಾಂಕ್ ನಿಯಮದಂತೆ ಲೆಕ್ಕ ಮಾಡಿದಾಗ ನಮ್ಮ ಸಹಕಾರಿ ಸಂಘದ ಅನುತ್ಪಾದಕ ಆಸ್ತಿಯ ಪ್ರಮಾಣವು ಸಾಲದ ಶೇಕಡಾ 10.24ರಷ್ಟು ಆಗುತ್ತದೆ. ಇದರಿಂದ ನಮ್ಮ ಸಂಸ್ಥೆಯ ನಿಜವಾದ ಆರ್ಥಿಕ ಮಾನದಂಡವನ್ನು ಅವಲೋಕಿಸಲು ಅನುಕೂಲವಾಗಿದೆ ಎಂದು ಭಾವಿಸಿದ್ದೇವೆ. ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ನಮ್ಮ ಸಹಕಾರಿ ಸಂಘವು ಭಾರತಿಯ ರಿಸರ್ವ ಬ್ಯಾಂಕ್ ನಿಯಮದ ಅನ್ವಯ ಲೆಕ್ಕ ಹಾಕಲಾಗುತ್ತಿದ್ದು, ಸಂಸ್ಥೆಯ ನಿಜವಾದ ಆರ್ಥಿಕ ಮಾನದಂಡವನ್ನು ಅವಲೋಕಿಸಲು ಅನುಕೂಲವಾಗಿದೆ ಎಂದು ಭಾವಿಸಿದ್ದು, ಮುಂದಿನ ವರ್ಷಗಳಲ್ಲಿ ನಾವು ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಕಷ್ಟು ನಿಧಿಗಳನ್ನು ಇಡುವುದಲ್ಲದೇ ಶೇಕಡಾ 0 ಮಟ್ಟಕ್ಕೆ ಎನ್.ಪಿ.ಎ. ಇಳಿಸಲು ನಮ್ಮ ಆಡಳಿತ ಮಂಡಳಿಯು ದೃಢವಾದ ಹೆಜ್ಜೆ ಇಟ್ಟಿದೆ.

## ಇತರ ಬರತಕ್ಕ ಬಾಬ್ತುಗಳು :

ವರ್ಷಾಂತ್ಯಕ್ಕೆ ಇತರ ಬರತಕ್ಕ ಬಾಬ್ತುಗಳಲ್ಲಿ ರೂ. 79.07 ಲಕ್ಷ ಇರುತ್ತಿದ್ದು, ಇದರಲ್ಲಿ ಬ್ಯಾಂಕಿನಿಂದ ಬರತಕ್ಕ ಬಡ್ಡಿ ರೂ. 18.18 ಲಕ್ಷ, ಸ್ಟಾಂಪ್ ಪೇಪರ ಭದ್ರತಾ ಠೇವು ರೂ. 1 ಲಕ್ಷ, ಹೀಗೆ ವಿವಿಧ ಖಾತೆಯಲ್ಲಿ ಬರತಕ್ಕದಿದ್ದು, ಬರತಕ್ಕ ಎಲ್ಲಾ ರಕಂಗಳನ್ನು ಸೂಕ್ತ ಆಧಾರ ಹೊಂದಿದ ಖಾತೆಗಳಾಗಿರುತ್ತದೆ.

## ಸಭೆಗಳು :

ವರದಿಯ ವರ್ಷ ದಿನಾಂಕ 24-12-2021ರಂದು ಒಂದು ವಾರ್ಷಿಕ ಸರ್ವ ಸಾಧಾರಣ ಸಭೆ, ಆಡಳಿತ ಮಂಡಳಿಯ 6 ಸಭೆಗಳು, ಕಾರ್ಯಕಾರಿ ಮಂಡಳಿಯ 19 ಸಭೆಗಳು ಮತ್ತು ರಿಕವರಿ ವಸೂಲಾತಿ ಸಮಿತಿಯ ಸಭೆಗಳು ಜರುಗಿದ್ದು, ಕಾಲ ಕಾಲಕ್ಕೆ ಆಡಳಿತಾತ್ಮಕವಾದ ಮತ್ತು ಕಾನೂನುಬದ್ಧವಾದ ನಿರ್ಣಯಗಳನ್ನು ಕೈಗೊಂಡಿದ್ದು, ಸಹಕಾರಿಯ ಪ್ರಗತಿಗೆ ತನ್ನದೆ ಆದ ಕೊಡುಗೆ ನೀಡಿದೆ ಎಂದು ತಿಳಿಸಲು ಹರ್ಷವೆನಿಸುತ್ತದೆ. ಸಹಕಾರ ನೀಡಿದ ಎಲ್ಲಾ ನಿರ್ದೇಶಕರನ್ನು, ಆಹ್ವಾನಿತರನ್ನು, ಮಾರ್ಗದರ್ಶಕ ಸಲಹೆಗಾರರನ್ನು, ಗೌರವಪೂರ್ವಕವಾಗಿ ಅಭಿನಂದಿಸುತ್ತೇವೆ.

## ಸಿಬ್ಬಂದಿಗಳು :

ನಮ್ಮ ಸಹಕಾರಿಯಲ್ಲಿ ಮಾರ್ಚ 31ಕ್ಕೆ ಇದ್ದಂತೆ ಒಟ್ಟು 45 ಜನ ಖಾಯಂ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಲಿದ್ದು, 9 ಸಿಬ್ಬಂದಿ ತಾತ್ಕಾಲಿಕ ತಳಹದಿಯ ಮೇಲೆ ನೇಮಕಗೊಂಡಿರುತ್ತಾರೆ. ಅದರಂತೆ 6 ತಿಂಗಳ ಅಂಚೆ ತೆರವಿನ ಶಿಕ್ಷಣ ಕೋರ್ಸನ್ನು ಕರ್ನಾಟಕ ಸಹಕಾರ ಯುನಿಯನ್‌ನವರು ನಡೆಸುತ್ತಲಿದ್ದು, ಈ ಕೋರ್ಸನ್ನು ಮುಗಿಸಲು ನಮ್ಮ ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ. ಈ ಕೋರ್ಸನ್ನು ಮುಗಿಸಿದ್ದಲ್ಲಿ ಸೇವಾ ಅವಧಿಯ ಮುಂಬಡ್ತಿ ಹಾಗೂ ಇನ್ನಿತರ ಅರ್ಹತೆಗಳಿಗೆ

ಪರಿಗಣಿಸಲು ತೀರ್ಮಾನಿಸಲಾಗಿದೆ. ಅದರಿಂದ ತರಬೇತಿ ಹೊಂದಿದ ಸಿಬ್ಬಂದಿಗಳಿಂದ ಪ್ರಗತಿಗೆ ಪೂರಕವಾಗಬಹುದೆಂದು ಭಾವಿಸಲಾಗಿದೆ.

## ಸಲಹೆಗಾರರು ಮತ್ತು ಮಾರ್ಗದರ್ಶಕರು :

ಸಹಕಾರಿಯ ಸಲಹೆಗಾರರಾಗಿ ಶ್ರೀ ಪಿ. ಜಿ. ಹೆಗಡೆ ಮತ್ತು ಶ್ರೀ ಪಿ. ಡಿ. ಮದ್ಗುಣಿ ಇವರು ತಮ್ಮ ಪೂರ್ತಿ ಸಮಯವನ್ನು ಸಹಕಾರಿ ಸಂಘದ ಅಭಿವೃದ್ಧಿ ಹಾಗೂ ಆಡಳಿತಾತ್ಮಕ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದು, ನಮ್ಮ ಸಂಘದ ಪ್ರಗತಿಯಲ್ಲಿ ಅವರ ಸೇವೆಯು ಗಣನೀಯವಾಗಿದೆ ಎಂದು ಹೇಳಲು ಹರ್ಷವೆನಿಸುತ್ತದೆ.

ಅದರಂತೆ ಕಾಲಕಾಲಕ್ಕೆ ಕಾನೂನು ಸಲಹೆಗಳನ್ನು ನೀಡುತ್ತಿರುವ ವಕೀಲರಾದ ಶ್ರೀ ಎನ್. ಆರ್. ಭಟ್ಟ (ಬಿದ್ರೆಪಾಲ) ಯಲ್ಲಾಪುರ, ಶ್ರೀ ಪಿ. ಜಿ. ಹೆಗಡೆ (ತಮಟಿ) ಕುಮಟಾ ಹಾಗೂ ಇತರೆ ಶಾಖೆಯ ಕಾನೂನು ಸಲಹೆಗಾರರಿಗೂ ಸಹಿತ ನಮ್ಮ ಹಾರ್ದಿಕ ಕೃತಜ್ಞತೆಗಳು ಮತ್ತು ಅವರುಗಳ ಸೇವೆಯನ್ನು ಇನ್ನು ಮುಂದೆ ಹೆಚ್ಚಿನ ರೀತಿಯಲ್ಲಿ ಬಯಸುತ್ತೇವೆ. ಅಲ್ಲದೆ ಅವಶ್ಯವಿದ್ದಾಗ ನಮಗೆ ಅನೇಕ ಕ್ಲಿಷ್ಟಕರ ಸಮಯದಲ್ಲಿ ಮಾರ್ಗದರ್ಶನ ನೀಡುತ್ತಿರುವ ಕೆ.ಡಿ.ಸಿ.ಸಿ. ಬ್ಯಾಂಕ್ ಲಿ., ಶಿರಸಿ ಇದರ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್. ಪಿ. ಶೆಟ್ಟಿ ಇವರನ್ನು ಎಂದೂ ಮರೆಯವಂತಿಲ್ಲ.

## ಲಾಭ ಹಾನಿ :

ವರದಿಯ ವರ್ಷ ಒಟ್ಟು ರೂ. 72.21 ಲಕ್ಷ ಲಾಭವಾಗಿದ್ದು, ಮುಂದಿನ ದಿನಗಳಲ್ಲಿ ವ್ಯವಹಾರಗಳನ್ನು ಹೆಚ್ಚಳ ಮಾಡುವ ಹಾಗೂ ಖರ್ಚು ವೆಚ್ಚಗಳನ್ನು ನಿಯಂತ್ರಣದಲ್ಲಿಡುವ ಮೂಲಕ ಆರ್ಥಿಕ ಪ್ರಗತಿ ಕುಂಠಿತಗೊಳ್ಳದಂತೆ ನೋಡಿಕೊಳ್ಳಲು ನಮ್ಮ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಕಟಿಬದ್ಧವಾಗಿದೆ ಎಂದು ತಿಳಿಸಬಯಸುತ್ತೇವೆ.

ವರ್ಷಾಂತ್ಯದ ಲಾಭವನ್ನು ಈ ಕೆಳಕಂಡ ರೀತಿಯಲ್ಲಿ ವಿನಿಯೋಗಿಸಲು ಆಡಳಿತ ಮಂಡಳಿಯು ಮಹಾಸಭೆಗೆ ಶಿಫಾರಸ್ಸು ಮಾಡಿದೆ.

| ವಿವರ | ರಕಂ |
|---|---|
| ರಿಜರ್ವ ಫಂಡ (25%) | 18,05,210–61 |
| ಸಹಕಾರಿ ಶಿಕ್ಷಣ ನಿಧಿ (2%) | 1,44,417–00 |
| ಅನಿರೀಕ್ಷಿತ ನಷ್ಟ ನಿಧಿ (20%) | 14,44,168–00 |
| ಸಾಮಾನ್ಯ ಕ್ಷೇಮ ನಿಧಿ (5%) | 3,61,042–00 |
| ಸದಸ್ಯರ ಶೇರು ಡಿವಿಡೆಂಡ್ (5%) | 25,75,946–00 |
| ಸಿಬ್ಬಂದಿಗಳ 1 ತಿಂಗಳ ಬೋನಸ್ | 8,25,000–00 |
| ಧರ್ಮಾರ್ಥ ವ ಪ್ರಚಾರ ನಿಧಿ | 65,055–00 |
| ಅಂತೂ... | **72,20,838–61** |

**ಲೆಕ್ಕಪರಿಶೋಧನೆ :**

2021–22ನೇ ಸಾಲಿನ ಅಧಿಕೃತ ಲೆಕ್ಕಪರಿಶೋಧನೆಯನ್ನು ಶ್ರೀ ಎಸ್. ಜಿ. ಹೆಗಡೆ, ಶಿರಸಿ ಇವರು ಮಾಡಿ ಸೂಕ್ತ ವಿವರಣೆಯೊಂದಿಗೆ ಪ್ರಗತಿಗೆ ಪೂರಕವಾದ ಸಲಹೆ ಸೂಚನೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಗೆ ಆಡಳಿತ ಮಂಡಳಿಯ ಸೂಕ್ತವಾದ ಅನುಪಾಲನಾ ವರದಿಯನ್ನು ತಯಾರಿಸಿ ಸಂಬಂಧಿಸಿದವರಿಗೆ ಕಳುಹಿಸಲಾಗಿದೆ.

ವರದಿಯ ವರ್ಷ ಸಂಘದ ವಸೂಲಾತಿಯ ಶೇಕಡಾ ಪ್ರಮಾಣವು 90.26% ಆದಕಾರಣ ಸಂಘವನ್ನು ಲೆಕ್ಕಪರಿಶೋಧಕರು 'ಬ' ವರ್ಗದಲ್ಲಿ ವಿಂಗಡಿಸಿರುತ್ತಾರೆ. ಮುಂದಿನ ದಿನಗಳಲ್ಲಿ ವಸೂಲಾತಿಯ ಪ್ರಮಾಣವು ನಿಗದಿತ ಶೇಕಡಾ 95 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಗುವ ರೀತಿಯಲ್ಲಿ ಈಗಿನಿಂದಲೇ ಕಾರ್ಯಪ್ರವೃತ್ತರಾಗಿ ಯೋಜಿತ ರೀತಿಯಲ್ಲಿ ಯೋಜನಾಬದ್ಧವಾಗಿ ವಸೂಲಾತಿ ಕ್ರಮ ಕೈಗೊಳ್ಳಲು ಸಿಬ್ಬಂದಿ ಹಾಗೂ ಸಂಬಂಧಪಟ್ಟವರಿಗೆ ಸ್ಪಷ್ಟವಾಗಿ ಸೂಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸಹಕಾರಿಯನ್ನು 'ಅ' ವರ್ಗದಲ್ಲಿ ಬರುವಂತೆ ಮಾಡಲು ಶ್ರಮವಹಿಸಲಾಗುವುದು.

ವರದಿಯ ವರ್ಷ ಆದಾಯಕರ ಹಾಗೂ ಇನ್ನಿತರ ಕರ ವ್ಯವಹಾಗಳಿಗೆ ಸಂಬಂಧಿಸಿದಂತೆ ಹಾಗೂ ಸಕಾಲದಲ್ಲಿ ಸೂಕ್ತ ಲೆಕ್ಕಪತ್ರಗಳನ್ನು ಇಲಾಖೆಗಳಿಗೆ ಸಾದರಪಡಿಸಲು ಮಾರ್ಗದರ್ಶನ ನೀಡಿದ ಹಾಗೂ ಸಂಘದ ಅಧಿಕೃತ ಲೆಕ್ಕಪರಿಶೋಧನೆ ಮಾಡಿ ವರದಿ ಸಲ್ಲಿಸಿದ ಶ್ರೀ ಸುಬ್ರಹ್ಮಣ್ಯ ಜಿ ಹೆಗಡೆ, ಶಿರಸಿ ಇವರಿಗೆ ಹಾಗೂ ಗೌರವ ಸಲಹೆಗಾರರಾಗಿ ಮಾರ್ಗದರ್ಶನ ನೀಡಿದ ಶ್ರೀ ಪಿ. ಡಿ. ಮದ್ಗುಣಿ ಹಾಗೂ ಟಿ. ಡಿ. ಎಸ್. ಗೆ ಸಂಬಂಧಿಸಿದ ಸಲಹೆ ನೀಡುತ್ತಿರುವ ಗಾಂವ್ಕರ ಅಸೋಸಿಯೇಟ್ಸ್, ಯಲ್ಲಾಪುರ ಇವರಿಗೂ ಹಾರ್ದಿಕ ಅಭಿನಂದನೆಗಳು.

## ಸದಸ್ಯರ ಸೇವೆಯಲ್ಲಿ ತಂತ್ರಜ್ಞಾನದ ಅಳವಡಿಕೆ :

ನಮ್ಮ ಸಹಕಾರಿ ಸಂಘವು ತನ್ನ ಆಡಳಿತ ಹಾಗೂ ಲೆಕ್ಕ ಪರಿಶೋಧನೆಯಲ್ಲಿ ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಂಡಿದ್ದು, ಈಗಾಗಲೇ ಇರುವ ಸೇವೆಗಳ ಹೊರತಾಗಿ ಅಂತರ ಶಾಖೆಯ ಆನ್‌ಲೈನ್ ವ್ಯವಸ್ಥೆ, ಖಾತೆಗಳ ಮೆಸೆಜಿಂಗ್ ವ್ಯವಸ್ಥೆ, ಕಾಗದ ರಹಿತ ಸೇವೆಗಳತ್ತ ಮುಂದುವರೆಯುವಿಕೆ ಇತ್ಯಾದಿ ತಾಂತ್ರಿಕ ಕಂಪ್ಯೂಟರಿಕೃತ ವ್ಯವಸ್ಥೆಯನ್ನು ಮೆ. ಆಟೋಮೆಶನ್ ಇನ್ಫೋ ಸೊಲ್ಯೂಶನ್ ಪ್ರೈ. ಲಿ. ಮಂಗಳೂರು ಇವರ ಸಹಯೋಗದೊಂದಿಗೆ ಕೇಂದ್ರ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಈ ಬಗ್ಗೆ ಸಿಬ್ಬಂದಿಗಳಿಗೂ ಕೂಡಾ ಸಾಕಷ್ಟು ತರಬೇತಿ ನೀಡಲಾಗಿದೆ. ಇದರಿಂದ ಗ್ರಾಹಕರು ತಮ್ಮ ವ್ಯವಹಾರಗಳನ್ನು ಪಾರದರ್ಶಕವಾಗಿ ನೋಡಿಕೊಳ್ಳಲು ಹಾಗೂ ಕ್ಷಿಪ್ರ ಸೇವೆ ಪಡೆಯಲು ಹೆಚ್ಚಿನ ಅನೂಕೂಲವಾಗುವುದಲ್ಲದೇ ಆಧುನಿಕ ಸೇವೆ ನೀಡುವಲ್ಲಿ ನಮ್ಮ ಸಂಸ್ಥೆಯು ಕೂಡಾ ಮುಂಚೂಣಿಯಲ್ಲಿದೆ ಎಂದು ಹೆಮ್ಮೆಯಿಂದ ಹೇಳಲು ಅಭಿಮಾನ ಎನಿಸುತ್ತದೆ


ಇದರ ಹೊರತಾಗಿ ಸಂಸ್ಥೆಯು ತನ್ನ ಎಲ್ಲಾ ಚಟುವಟಿಕೆಗಳನ್ನು ಪ್ರಚಾರಪಡಿಸುವ ಉದ್ದೇಶದಿಂದ ವೆಬ್ ಸೈಟ್ ಹೊಂದಿದ್ದು ನಮ್ಮ ವೆಬ್ ಸೈಟ್ ಸಂಖ್ಯೆ uksouharda.com ಇರುತ್ತದೆ. ಇದರಿಂದ ಸಂಸ್ಥೆಯು ನೀಡುವ ಸೇವೆಗಳ ಜೊತೆಗೆ ಸದಸ್ಯರಿಗೆ ಅಗತ್ಯ ಮಾಹಿತಿ ನೀಡಲಿಕ್ಕೂ ಪ್ರವಾಸೋದ್ದಿಮೆ ಹಾಗೂ ಇನ್ನಿತರ ಹೊಸ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಲಿಕ್ಕೂ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇವೆ.

**ಶಾಖೆಗಳು :**

ಸಹಕಾರಿ ಸಂಘವು ಪ್ರಧಾನ ಕಛೇರಿಯನ್ನೊಳಗೊಂಡು ಒಟ್ಟೂ 11 ಶಾಖೆಗಳನ್ನು ಹೊಂದಿದೆ.

## ಮುಂದಿನ ಧ್ಯೇಯ ಧೋರಣೆಗಳು :

ನಮ್ಮ ಸಹಕಾರಿ ಸಂಘವು ವರ್ಷಾನುವರ್ಷ ಪ್ರಗತಿಯ ಪಥದಲ್ಲಿ ದಾಪುಗಾಲು ಇಡುತ್ತಿದ್ದು, ಮಹಾಸಭೆಯಿಂದ ಸೂಚಿಸಲ್ಪಟ್ಟ ಸಲಹೆ ಸೂಚನೆಗಳ ಅನ್ವಯ ಹೊಸ ಹೊಸ ಯೋಜನೆಗಳ ಬಗ್ಗೆ ದೂರದೃಷ್ಟಿಯನ್ನು ಹೊಂದಿ ಕೆಲವು ಯೋಜನೆಗಳನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಿದಂತೆ ಈಗ ಸಹಕಾರಿ ಸಂಘಕ್ಕೆ IRDAI ದಿಂದ ಕಾರ್ಪೋರೇಟ ಏಜನ್ಸಿಯ ಮಂಜೂರಾತಿ ದೊರಕಿದ್ದು ಅದರ ಅನ್ವಯ ಬೇರೆ– ಬೇರೆ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಪತ್ರ ಮಾಡಿಕೊಂಡು ಇತರೆ ಆದಾಯದ ಕ್ರೋಢೀಕರಣದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ನಿರ್ವಹಿಸುವ ಬಗ್ಗೆ ಗುರಿ ಹೊಂದಿರಲಾಗಿರುತ್ತದೆ. ಅದರಂತೆ ಈ ಬಗ್ಗೆ ಸಹಕಾರಿ ಸಂಘದ ಅಧ್ಯಕ್ಷರ ಆಶಯದಂತೆ 2022–23ನೇ ಆರ್ಥಿಕ ವರ್ಷದಲ್ಲಿ ಕನಿಷ್ಟ ರೂ. 50 ಲಕ್ಷ ರಕಂನ್ನು ಇತರೆ ಆದಾಯದ ರೂಪದಲ್ಲಿ ಬರುವಂತೆ ಸಹಕಾರಿ ಸಂಘದ ಎಲ್ಲಾ ಸಿಬ್ಬಂದಿಗಳು ದೃಢ ಸಂಕಲ್ಪಹೊಂದಿ ಕೆಲಸ ನಿರ್ವಹಿಸಲು ನಿರ್ಧರಿಸಲಾಗಿದೆ. ಸಹಕಾರಿ ಸಂಘದಲ್ಲಿ ಈಗಾಗಲೇ ಹೆಚ್ಚುವರಿಯಾಗಿ ಇರುವ ರಕಂನ್ನು ಕಾಲಕಾಲಕ್ಕೆ ಆರ್ಥಿಕ ತಜ್ಞರ ಸಲಹೆ ಸೂಚನೆಗಳನ್ನು ಪಡೆದು ಹೆಚ್ಚಿನ ಆದಾಯ ಹಾಗೂ ಭದ್ರತೆಯಿರುವ ಗುಂತಾವಣೆಗಳಲ್ಲಿ ಗುಂತಾಯಿಸಲಾಗುತ್ತಿರುತ್ತದೆ. ಮತ್ತು ಸಹಕಾರಿ ಸಂಘದ ಕಟಬಾಕಿ ಪ್ರಮಾಣವನ್ನು ಆದಷ್ಟು ಸಾಲಗಾರರ ಮನವೊಲಿಸಿ ಸಾಲ ವಸೂಲಿ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಿ ಪಡೆದು ಎನ್. ಪಿ. ಎ. ಪ್ರಮಾಣವನ್ನು ಕಡಿಮೆ ಮಟ್ಟಕ್ಕೆ ಇಳಿಸುವ ಸ್ಪಷ್ಟವಾದ ಮಾರ್ಗಸೂಚಿಯೊಂದಿಗೆ ಕಾರ್ಯಪ್ರವೃತ್ತರಾಗಿರುತ್ತೇವೆ.



# ಕೃತಜ್ಞತೆಗಳು

2021–22ನೇ ಸಾಲಿನ ಸಹಕಾರಿ ಸಂಘದ ಕಾರ್ಯಚಟುವಟಿಕೆಗಳು, ಆರ್ಥಿಕ ವ್ಯವಹಾರಗಳ ಪರಿಣಾಮ, ಮುಂದಿನ ದಿಕ್ಸೂಚಿ ಇತ್ಯಾದಿಗಳ ಕುರಿತು ಆಮೂಲಾಗ್ರವಾದ ಟಿಪ್ಪಣಿಯೊಂದಿಗೆ ಪಾರದರ್ಶಕವಾಗಿ ಈ ವರದಿಯನ್ನು ಸಾದರಪಡಿಸಿದ್ದು, ನಮ್ಮ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವ ಎಲ್ಲರನ್ನು ಸ್ಮರಿಸುವುದು ನಮ್ಮ ಕರ್ತವ್ಯದ ಪ್ರಮುಖ ಭಾಗವಾಗಿದೆ ಎಂದು ಭಾವಿಸಿದ್ದೇನೆ.

ನಮ್ಮ ಸಂಸ್ಥೆಯ ವಿವಿಧ ಸೇವೆಯನ್ನು ಪಡೆಯುತ್ತಿರುವ ಎಲ್ಲ ವರ್ಗದ ಗ್ರಾಹಕ ಬಂಧುಗಳನ್ನು, ನಮ್ಮ ಮೇಲಿನ ನಂಬಿಕೆಯಿಂದ ತಮ್ಮ ಉಳಿತಾಯದ ಹಣವನ್ನು ನಮ್ಮಲ್ಲಿ ಠೇವಣಿ ಮಾಡಿರುವ ಎಲ್ಲ ಠೇವಣಿದಾರರನ್ನು, ತಮ್ಮ ಆರ್ಥಿಕ ಚಟುವಟಿಕೆಗಳಿಗೆ ನಮ್ಮಿಂದ ಸಾಲದ ರೂಪದಲ್ಲಿ ಹಣ ಪಡೆದು ತಮ್ಮ ವ್ಯವಹಾರಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವ ಹಾಗೂ ಸಕಾಲಕ್ಕೆ ಮರುಪಾವತಿ ಮಾಡುತ್ತಿರುವ ಎಲ್ಲಾ ಗೌರವಾನ್ವಿತ ಗ್ರಾಹಕ ಬಂಧುಗಳನ್ನು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ನಮ್ಮ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ನೀಡಲು ನೇರವಾಗುತ್ತಿರುವ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳಲ್ಲಿನ ಎಲ್ಲಾ ಪದಾಧಿಕಾರಿಗಳನ್ನು, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ.

ಉತ್ತರ ಕನ್ನಡ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ್, ಶಿರಸಿ ಇದರ ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾರ್ಮಿಕ ಸಚಿವರು, ಅಪೆಕ್ಸ ಬ್ಯಾಂಕಿನ ನಿರ್ದೇಶಕರು ಆದ ಮಾನ್ಯ ಶ್ರೀ ಶಿವರಾಮ ಹೆಬ್ಬಾರರಿಗೆ, ಹಾಗೂ ಮಾನ್ಯ ಸಂಸದರಾದ ಶ್ರೀ ಅನಂತಕುಮಾರ ಹೆಗಡೆ ಇವರಿಗೂ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಕೃಷ್ಣ ರೆಡ್ಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ಹಾಗೂ ಬೆಳಗಾವಿಯ ಪ್ರಾಂತೀಯ ಕಛೇರಿಯ ಮತ್ತು ಬೆಂಗಳೂರಿನ ಕಛೇರಿಯ ಎಲ್ಲಾ ಸಿಬ್ಬಂದಿಗಳು ನಮ್ಮ ಸಂಘವನ್ನು ವಿಶೇಷವಾಗಿ ಗುರುತಿಸಿ ಕಾಲಕಾಲಕ್ಕೆ ಅವಶ್ಯವುಳ್ಳ ಸಲಹೆ ಸೂಚನೆಗಳನ್ನು ಹಾಗೂ ಮಾರ್ಗದರ್ಶನವನ್ನು ನೀಡುತ್ತಿದ್ದು ಅವರ ಸಹಕಾರವನ್ನು ಸ್ಮರಿಸುತ್ತೇನೆ.

ನಮ್ಮ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ನಮಗೆ ಕಾಲ ಕಾಲಕ್ಕೆ ಬೇಕಾದ ಕಾನೂನು ನೆರವು ಹಾಗೂ ಇನ್ನಿತರ ವ್ಯವಹಾರಿಕ ಸಲಹೆಗಳನ್ನು ನೀಡುತ್ತಾ ಬಂದಿರುವ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಎಲ್ಲ ಪದಾಧಿಕಾರಿಗಳನ್ನು, ಸಹಕಾರ ಇಲಾಖೆಯ ಎಲ್ಲ ಅಧಿಕಾರಿಗಳನ್ನು ಸಕಾಲದಲ್ಲಿ ನಮ್ಮ ಸಾಲ

ವಸೂಲಾತಿಯ ದಾವಾ ಪ್ರಕರಣಗಳನ್ನು ಇತ್ಯರ್ಥ ಪಡಿಸುವಲ್ಲಿ ಅತಿ ಶೀಘ್ರವಾಗಿ ಸ್ಪಂದಿಸುತ್ತಿರುವ ಸಹಕಾರಿಯ ನ್ಯಾಯಾಲಯದ ಎಲ್ಲ ಪದಾಧಿಕಾರಿಗಳನ್ನು ಅವರು ನೀಡುತ್ತಿರುವ ಸಹಕಾರಕ್ಕಾಗಿ ಸ್ಮರಿಸುತ್ತೇನೆ.

ನಮ್ಮ ಸಹಕಾರಿ ಸಂಘವು ವಿವಿಧ ಕ್ಷೇತ್ರಗಳಲ್ಲಿನ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಗ್ರಾಹಕರ ಅವಶ್ಯಕತೆಗಳಿಗೆ ಅನುಗುಣವಾಗಿ ವಿಮಾ ಪಾಲಿಗಳನ್ನು ವಿತರಿಸುತ್ತಿದ್ದು, ಈ ಕಾರ್ಯದಲ್ಲಿ ಅಗತ್ಯ ಸಲಹೆ ಸೂಚನೆಗಳೊಂದಿಗೆ ಮಾರ್ಗದರ್ಶನ ನೀಡುತ್ತಾ ಬಂದಿರುವ ವಿಮಾ ಕಂಪನಿಯ ಎಲ್ಲಾ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳ ಸಹಕಾರವನ್ನು ಸ್ಮರಿಸುತ್ತೇನೆ.

ನಮ್ಮ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು, ಪಿಗ್ಮಿ ಸಂಗ್ರಾಹಕರು, ಬಂಗಾರ ಪರೀವಿಕ್ಷಕರು ಸಂಘದ ಪ್ರತಿಯೊಂದು ಅಭಿವೃದ್ಧಿಯ ವಿಚಾರದಲ್ಲಿ ನನ್ನೊಂದಿಗೆ ಸ್ಪಂದಿಸುತ್ತಾ ಎಲ್ಲ ಸಂದರ್ಭಗಳಲ್ಲೂ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಎಲ್ಲ ನಿರ್ದೇಶಕರುಗಳಿಗೆ, ಆಡಳಿತ ಸಲಹೆಗಾರರಿಗೆ ಹಾಗೂ ಕಾನೂನು ಸಲಹೆಗಾರರಿಗೆ ಮತ್ತು ಎಲ್ಲಾ ಲೆಕ್ಕಪರಿಶೋಧಕರಿಗೆ ಧನ್ಯವಾದಗಳು.

ಆಡಳಿತ ಮಂಡಳಿಯ ವರ್ಷದ ಸಾಧನೆಯನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಾ ಮುಂದಿನ ಪ್ರಗತಿಗೆ ಭಾಜನರಾಗಬೇಕಾದ ಈ ಎಲ್ಲಾ ನಿರ್ದೇಶಕ ಸದಸ್ಯರು, ಸಿಬ್ಬಂದಿಗಳು ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲಾ ಗಣ್ಯಾತಿ ಗಣ್ಯ ಸದಸ್ಯರುಗಳಿಗೆ ಅಭಿಮಾನಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಮುಂದಿನ ವರ್ಷ, ದಿನಗಳು ಯು. ಕೆ. ಸೌಹಾರ್ದ ಸಹಕಾರಿ ಸಂಘದ ಅಭಿವೃದ್ಧಿಯ ಪರ್ವವಾಗಲು ತಮ್ಮೆಲ್ಲರ ಸಹಕಾರವನ್ನು ಬಯಸುತ್ತಾ ಈ ವರದಿಗೆ ವಿರಾಮ ನೀಡುತ್ತಿದ್ದೇನೆ.

ಸ್ಥಳ : ಯಲ್ಲಾಪುರ
ದಿನಾಂಕ : 10-08-2022

**ಪ್ರಮೋದ ಹೆಗಡೆ**
ಅಧ್ಯಕ್ಷರು

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## ದಿನಾಂಕ : 31-03-2022ಕ್ಕೆ ಇದ್ದಂತೆ ಸಮೀಕೃತ ಅಢಾವೆ ಪತ್ರಿಕೆ

| ವಿವರಗಳು | ಶೆಡ್ಯೂಲ್‌ಗಳು | 31-03-2022ಕ್ಕೆ ಇದ್ದಂತೆ | 31-03-2021ಕ್ಕೆ ಇದ್ದಂತೆ |
|---|---|---|---|
| ಬಂಡವಾಳ ಮತ್ತು ಸಾಲದ ವಿವರಗಳು : | | | |
| ಅಧಿಕೃತ ಶೇರು ಬಂಡವಾಳ | | 10,00,00,000-00 | 10,00,00,000-00 |
| ವಸೂಲಾದ ಶೇರುಗಳು | 1 | 5,67,59,000-00 | 5,49,76,300-00 |
| ನಿಧಿಗಳು | 2 | 7,78,51,462-95 | 6,48,28,609-10 |
| ಠೇವುಗಳು | 3 | 102,79,21,343-75 | 94,31,57,393-08 |
| ಸಾಲಗಳು | 4 | 65-00 | 50,00,028-00 |
| ಇತರ ಬಾಬ್ತುಗಳು | 5 | 1,72,99,186-50 | 1,72,61,057-28 |
| ಪ್ರಶಸ್ತಿಗಳು | 6 | 10,002-00 | 10,002-00 |
| ನಿಕ್ಕೀ ಲಾಭ | | 72,20,838-61 | 1,15,69,962-85 |
| ಅಂತೂ... | | **118,70,61,898-81** | **109,68,03,352-31** |
| ಆಸ್ತಿಗಳು ಮತ್ತು ಜಿಂದಗಿ ವಿವರಗಳು : | | | |
| ನಗದು ಕೈಶಿಲ್ಕು | | 61,30,439-50 | 75,66,930-41 |
| ಬ್ಯಾಂಕಿನಲ್ಲಿ ಶಿಲ್ಕು | 7 | 1,31,57,242-10 | 2,07,67,934-87 |
| ಶೇರು ಮತ್ತು ಠೇವುಗಳಲ್ಲಿ ಗುಂತಾವಣೆ | 8 | 37,36,39,696-00 | 34,25,73,746-00 |
| ಕೊಟ್ಟ ಸಾಲಗಳು ಮತ್ತು ಮುಂಗಡಗಳು | 9 | 76,88,70,302-00 | 71,18,96,367-00 |
| ಆಸ್ತಿಗಳು | 10 | 1,73,57,546-00 | 68,43,981-00 |
| ಬರತಕ್ಕ ಬಾಬ್ತುಗಳು | 11 | 79,06,673-21 | 71,54,393-03 |
| ಅಂತೂ... | | **118,70,61,898-81** | **109,68,03,352-31** |

ಪ್ರಧಾನ ವ್ಯವಸ್ಥಾಪಕರು ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

## :: ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ ::

**ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ** (ಉ. ಕ.) ಇದರ ಸನ್ 2021-22ನೇ ಸಾಲಿನ ಲೆಕ್ಕ ಪತ್ರಗಳನ್ನು ನಾನು ಪರಿಶೋಧಿಸಿರುತ್ತೇನೆ. ಲೆಕ್ಕಪರಿಶೋಧನೆಗೆ ಅವಶ್ಯವಿರುವ ಮಾಹಿತಿ ಮತ್ತು ಸಕಾರಣಗಳನ್ನು ಸಂಬಂಧಪಟ್ಟವರಿಂದ ಪಡೆದಿರುತ್ತೇನೆ. ಮತ್ತು ಅವುಗಳು ನನಗೆ ತಿಳಿದ ಮಟ್ಟಿಗೆ ತೃಪ್ತಿಕರವಾಗಿರುತ್ತದೆ. ನನ್ನ ಅಭಿಪ್ರಾಯದಂತೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ವ್ಯವಸ್ಥಾಪಕರು ನೀಡಿದ ವಿವರಣೆ ಹಾಗೂ ಸಮಜಾಯಿಷಿಗಳ ಮೇರೆಗೆ ಲಗತ್ತಿಸಿದ ನನ್ನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿದ ಅಂಶಗಳಿಗೆ ಒಳಪಟ್ಟು ಸನ್ 2021-22ನೇ ಸಾಲಿನ ಲಾಭ ನಷ್ಟ ತಃಖ್ತೆ ಹಾಗೂ ದಿನಾಂಕ : 31-03-2022ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆಯು ಸಂಘದ ನೈಜ ಹಾಗೂ ಕರಾರುವಕ್ಕಾದ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

**ಶ್ರೀ ಸುಬ್ರಹ್ಮಣ್ಯ ಜಿ. ಹೆಗಡೆ**
ಲೆಕ್ಕ ಪರಿಶೋಧಕರು (Membership No - 023643)
ಸಿ-21/02/2013-12:27:04
'ಸೃಷ್ಟಿ', ವಿನಾಯಕ ಕಾಲೋನಿ, ಶಿರಸಿ-581402

ಸ್ಥಳ : **ಯಲ್ಲಾಪುರ**
ದಿನಾಂಕ : 05-07-2022

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## ದಿನಾಂಕ : 01-04-2021 ರಿಂದ 31-03-2022ರ ವರೆಗಿನ ಸಮೀಕೃತ ಲಾಭ-ಹಾನಿ ತಃಖ್ತೆ

| 31-03-2021 | ಖರ್ಚಿನ ವಿವರ | 31-03-2022 | 31-03-2021 | ಉತ್ಪನ್ನದ ವಿವರ | 31-03-2022 |
|---|---|---|---|---|---|
| 1,93,474-00 | ವಿದ್ಯುತ್ ಬಿಲ್ಲು | 2,04,702-90 | | ಗುಂತಾವಣೆ | |
| 7,55,25,826-00 | ಬಡ್ಡಿ | 7,79,26,211-00 | 1,96,69,725-00 | ಮೇಲಿನ ಬಡ್ಡಿ | 1,91,80,994-00 |
| 17,345-00 | ಜಾಹೀರಾತು ವೆಚ್ಚ | 1,183-32 | 1,51,786-00 | ಶೇರು ಫೀ | 1,55,713-00 |
| 94,63,640-00 | ವೇತನ | 96,52,259-00 | -- | ಇತರೇ | 3,34,355-58 |
| 66,000-00 | ನೌಕರರ ಭತ್ತೆ | 46,500-00 | 81,368-33 | ಸೇವಾ ಶುಲ್ಕ | 97,509-12 |
| 14,78,474-54 | ಸವಕಳಿ | 19,76,221-99 | 22,30,373-00 | ಪರಿಶೀಲನಾ ಶುಲ್ಕ | 23,39,895-00 |
| 33,762-64 | ಇತರೇ | 30,645-61 | 52,800-00 | ಪ್ರವೇಶ ಫೀ | 45,947-00 |
| 3,99,229-96 | ಪ್ರಿಂಟಿಂಗ್ ವ ಸ್ಟೇಶನರಿ | 3,42,193-55 | | ಕೆಡಿಸಿಸಿ ಬ್ಯಾಂಕ | |
| 2,70,689-16 | ಪೋಸ್ಟೇಜ ವ ಟೆಲಿಫೋನ್ | 2,68,093-31 | -- | ಶೇರು ಡಿವಿಡೆಂಡ್ | 1,57,500-00 |
| 22,500-00 | ವೃತ್ತಿ ತೆರಿಗೆ | 22,500-00 | 3,39,643-00 | ರಿಕವರಿ ಖರ್ಚು | -- |
| 19,21,335-00 | ಪಿಗ್ಮಿ ಕಮೀಷನ್ | 21,15,056-00 | | ಸರ್ಕಾರಿ ಬಾಂಡ್ | |
| 2,81,879-00 | ವಿಮಾ ಖಾತೆ | 4,73,018-00 | -- | ಮೇಲಿನ ಬಡ್ಡಿ | 90,250-00 |
| 59,621-00 | ಪ್ರವಾಸ ಭತ್ತೆ | 87,726-00 | 2,67,440-00 | ಪಾರ್ಮ ಫೀ | 2,72,852-00 |
| -- | ಸಿಸಿಎಸ್‌ಐಲ್ ವೆಚ್ಚ | 295-00 | 1,69,231-48 | ಕಮೀಶನ್ | 1,75,511-07 |
| | ಐಆರ್‌ಡಿಎಐ | | | ಸಾಲಗಳ ಮೇಲಿನ | |
| -- | ನೋಂದಣಿ ವೆಚ್ಚ | 10,000-00 | 8,53,49,729-00 | ಬಡ್ಡಿ | 9,60,55,101-00 |
| 78,926-00 | ಭವಿಷ್ಯನಿಧಿ ಆಡಳಿತ ವೆಚ್ಚ | 1,59,786-00 | 53,635-00 | ಅಮಲಜಾರಿ ಫೀ | 1,34,214-00 |
| 1,54,438-90 | ವಾಹನ ವೆಚ್ಚ | 1,99,081-68 | 29,000-00 | ವಕಾಲತ್ ಫೀ | -- |
| 19,60,380-00 | ಇಮಾರತ್ ಬಾಡಿಗೆ | 20,47,040-00 | | ಫಿಟಿಂಗ್ ವ ಫಿಕ್ಸರ್ಸ | |
| 3,41,000-00 | ಗೌರವಧನ | 3,09,500-00 | 15,419-00 | ಮಾರಾಟ | -- |
| 1,06,200-00 | ಸಿಟಿಂಗ್ ಭತ್ತೆ | 65,700-00 | | ಇ-ಸ್ಟಾಂಪ್ | |
| 1,47,500-00 | ಆಡಿಟ್ ಫೀ | 5,18,122-00 | 99,486-47 | ಸೇವಾ ಶುಲ್ಕ | 1,06,550-05 |
| 42,389-00 | ವಾಹನ ಬಾಡಿಗೆ | 61,595-00 | 15,55,161-00 | ಹೆಚ್ಚುವರಿ ಬಡ್ಡಿ | 32,22,847-00 |
| -- | ವಕಾಲತ್ ಫೀ | 10,125-00 | | ಡಿಬಿಎಸ್ ಬ್ಯಾಂಕ್ | |
| 1,15,164-00 | ದಿನಗೂಲಿ | 1,61,300-00 | 22,028-00 | ಎಸ್.ಬಿ. ಬಡ್ಡಿ | 79,605-00 |
| 1,34,162-47 | ಕಂಪ್ಯೂಟರ್ ಸರ್ವಿಸ್ | 1,02,538-64 | | ನೌಕರರ ಕ್ಷೇಮನಿಧಿ | |
| 9,08,745-00 | ಭವಿಷ್ಯನಿಧಿ ವಂತಿಗೆ | 8,77,658-00 | 5,000-00 | ವಂತಿಗೆ | -- |
| | ಎಸ್.ಎಂ.ಎಸ್. | | | ಡಿವಿಡೆಂಡ್ | |
| -- | ಸೇವಾ ಶುಲ್ಕ | 29-50 | 3,74,815-00 | ಸರಿಪಡಿಸುವ ಖಾತೆ | -- |
| -- | ಕರಡುಸಾಲದ ಅನುವು | 40,00,000-00 | | ಎಸ್.ಬಿ.ಐ.ಯಲ್ಲಾಪುರ | |
| -- | ನೋಂದಣಿ ಶುಲ್ಕ | 20,000-00 | 59-00 | ಎಸ್. ಬಿ. ಬಡ್ಡಿ | -- |
| -- | ವಾಹನ ರಿಪೇರಿ | 2,200-00 | 11,04,66,699-28 | ಮುಂದುವರಿದ ಬೇರೀಜು... | 12,24,48,843-82 |



(16ನೇ ಪುಟಕ್ಕೆ)

(15ನೇ ಪುಟದಿಂದ)

| 31-03-2021 | ಖರ್ಚಿನ ವಿವರ | 31-03-2022 | 31-03-2021 | ಉತ್ಪನ್ನದ ವಿವರ | 31-03-2022 |
|---|---|---|---|---|---|
| 68,000-00 | ಸಹಕಾರಿ ವಂತಿಗೆ | 54,500-00 | 11,04,66,699-28 | ಹಿಂದಿನ ಬೇರೀಜು... | 12,24,48,843-82 |
| 4,563-83 | ಲೈಸನ್ಸ ನವೀಕರಣ | — | | | |
| 7,41,636-00 | ಸಾಪ್ಟವೇರ್ ಮಾಸಿಕ ಶುಲ್ಕ | 7,64,744-00 | | | |
| 45,500-00 | ದೇಣಿಗೆ | — | | | |
| 12,61,552-00 | ಸಾಲಗಳ ಮೇಲಿನ ಬಡ್ಡಿ | 6,96,122-00 | | | |
| 14,170-00 | ಕಂಪ್ಯೂಟರ್ ಎ.ಎಂ.ಸಿ. | 14,205-71 | | | |
| 49,531-00 | ಶಾಖೆ ಸ್ಥಳಾಂತರ ವೆಚ್ಚ | — | | | |
| 1,97,500-00 | ವಾಹನ ನಿಲಗಡೆ ಬಾಡಿಗೆ | 1,99,200-00 | | | |
| 1,18,717-00 | ಸಂಚಿತ ವೇತನ | 4,09,735-00 | | | |
| 7,69,390-00 | ಬಡ್ಡಿ ರಿಯಾಯಿತಿ | 86,07,950-00 | | | |
| 3,635-00 | ವಾರ್ಷಿಕಸಭೆ ವೆಚ್ಚ | 14,880-00 | | | |
| 16,000-00 | ಪ್ರಭಾರಿಶಾಖಾ ವ್ಯವಸ್ಥಾಪಕರ ಭತ್ತೆ | 30,500-00 | | | |
| 62,187-00 | ನೌಕರರ ಸಮವಸ್ತ್ರ ಖಾತೆ | 1,16,877-00 | | | |
| 9,440-00 | ಕೆಡಿಸಿಸಿಬ್ಯಾಂಕ್ ಪರಿಶೀಲನಾ ಶುಲ್ಕ | 9,440-00 | | | |
| 1,116-00 | ವರ್ಗಾವಣೆ ವೆಚ್ಚ | — | | | |
| 29,000-00 | ಸಹಾಯಧನ | — | | | |
| 1,33,531-93 | ಜಿ.ಎಸ್.ಟಿ. ಪಾವತಿ | — | | | |
| 5,000-00 | ಜಿ.ಎಸ್.ಟಿ. ತೆರಿಗೆ ಸಲಹಾ ಫೀ | 10,000-00 | | | |
| -- | ಶಾಖೆ ಪ್ರಾರಂಭೋತ್ಸವ ಖರ್ಚು | 19,249-00 | | | |
| 2,100-00 | ಚಲನ್ ಫೀ | 2,000-00 | | | |
| 27,149-00 | ರಿಕರಿಂಗಠೇವು ಕಮೀಶನ್ | 51,685-00 | | | |
| 4,338-00 | ಶೇರು ಅಮಾನತ್ ವೆಚ್ಚ | 396-00 | | | |
| 7,910-00 | ಕಟ್ಟಡಬಾಡಿಗೆ ಕರಾರು ವೆಚ್ಚ | — | | | |
| 5,450-00 | ಸೌಹಾರ್ದ ವಾರ್ಷಿಕ ಶುಲ್ಕ | 5,000-00 | | | |
| 12,000-00 | ಸಲಹಾ ಫೀ (ಪಿ.ಎಫ್.) | 15,000-00 | | | |
| 6,458-00 | ಬಡ್ಡಿ ವಿನಾಯಿತಿ | — | | | |
| 47,200-00 | ಸಹಕಾರಿ ಚುನಾವಣಾ ವೆಚ್ಚ | — | | | |
| 14,55,980-00 | ಅನಿರೀಕ್ಷಿತ ನಷ್ಟನಿಧಿ ಅನುವು | — | | | |
| -- | ಮುದ್ರಾಂಕ ಶುಲ್ಕ ಪಾವತಿ | 9,69,075-00 | | | |
| -- | ಕಟ್ಟಡ ನವೀಕರಣ ವೆಚ್ಚ | 32,530-00 | 11,04,66,699-28 | ಮುಂದುವರಿದ ಬೇರೀಜು... | 12,24,48,843-82 |



(17ನೇ ಪುಟಕ್ಕೆ)

(16ನೇ ಪುಟದಿಂದ)

| 31-03-2021 | ಖರ್ಚಿನ ವಿವರ | 31-03-2022 | 31-03-2021 | ಉತ್ಪನ್ನದ ವಿವರ | 31-03-2022 |
|---|---|---|---|---|---|
| -- | ಜಿಎಸ್‌ಟಿ ರಿಟರ್ನ ಫೈಲಿಂಗ್ ವೆಚ್ಚ | 12,000-00 | 11,04,66,699-28 | ಹಿಂದಿನ ಬೇರೀಜು... | 12,24,48,843-82 |
| -- | ಸಿಎಸ್‌ಜಿಎಲ್ ವಾರ್ಷಿಕ ಶುಲ್ಕ | 1,635-00 | | | |
| -- | ಆದಾಯತೆರಿಗೆ ಅನುವು | 15,00,000-00 | | | |
| 1,15,69,962-85 | ನಿಕ್ಕೀ ಲಾಭ | 72,20,838-61 | | | |
| **11,04,66,699-28** | .....ಅಂತೂ..... | **12,24,48,843-82** | **11,04,66,699-28** | .....ಅಂತೂ..... | **12,24,48,843-82** |

# :: ಶೆಡ್ಯೂಲ್‌ಗಳು ::

## ಶೆಡ್ಯೂಲ್ 01 : ವಸೂಲಾದ ಶೇರುಗಳು

| ವಿವರ | 2020-21 | 2021-22 |
|---|---|---|
| ಮೆಂಬರರ ಶೇರು | 5,49,76,300-00 | 5,67,59,000-00 |
| ಅಂತೂ.. | **5,49,76,300-00** | **5,67,59,000-00** |

## ಶೆಡ್ಯೂಲ್ 02 : ನಿಧಿಗಳು

| ವಿವರ | 2020-21 | 2021-22 |
|---|---|---|
| ಕಾಯ್ದಿಟ್ಟ ನಿಧಿ | 93,33,584-00 | 1,22,26,074-00 |
| ನೌಕರರ ಕ್ಷೇಮ ನಿಧಿ | 21,90,422-00 | 21,90,422-00 |
| ನೌಕರರ ಭವಿಷ್ಯ ನಿಧಿ | 1,59,667-00 | 1,56,526-00 |
| ಕರಡು ಸಾಲದ ನಿಧಿ | 3,77,48,656-00 | 4,17,48,656-00 |
| ಸಾಮಾನ್ಯ ಕ್ಷೇಮ ನಿಧಿ | 15,57,940-00 | 15,05,789-00 |
| ಕಟ್ಟಡ ನಿಧಿ | 55,00,000-00 | 92,10,500-00 |
| ಅನಿರೀಕ್ಷಿತ ನಷ್ಟ ನಿಧಿ | 79,29478-74 | 1,02,43,470-74 |
| ಧರ್ಮಾರ್ಥ ವ ಪ್ರಚಾರ ನಿಧಿ | 1,52,500-00 | 34,945-00 |
| ಸಹಕಾರಿ ಶಿಕ್ಷಣ ನಿಧಿ [ಅಕಾಡೆಮಿ] | 7,616-00 | 7,616-00 |
| ಡಿವಿಡೆಂಡ್ ಸ್ಥಿರೀಕರಣ ನಿಧಿ | 2,48,745-36 | 2,48,745-36 |
| ಗುಂತಾವಣೆ ಭದ್ರತಾ ನಿಧಿ | -- | 2,78,718-85 |
| ಅಂತೂ.. | **6,48,28,609-10** | **7,78,51,462-95** |

## ಶೆಡ್ಯೂಲ್ 03 : ಠೇವುಗಳು

| ವಿವರ | 2020-21 | 2021-22 |
|---|---|---|
| ಉಳಿತಾಯ ಖಾತೆ | 5,68,06,398-57 | 4,18,53,460-74 |
| ಕ್ಯಾಶ್ ಸರ್ಟಿಫಿಕೇಟ | 38,48,55,472-00 | 48,32,79,430-00 |
| ಮುದ್ದತಿ ಠೇವು | 44,53,93,159-00 | 42,33,43,140-00 |
| ರಿಕರಿಂಗ್ ಠೇವು | 92,59,006-00 | 1,08,76,406-00 |
| ಪಿಗ್ಮಿ ಠೇವು | 2,84,29,049-00 | 2,97,94,294-00 |
| ಭದ್ರತಾ ಠೇವು | 13,54,500-00 | 16,63,500-00 |
| ಸಂಚಯನಿ ರಿಕರಿಂಗ್ ಠೇವು | 11,00,600-00 | 7,33,100-00 |
| ಚಾಲ್ತಿ ಖಾತೆ | 1,59,59,208-51 | 1,56,73,265-01 |
| ಪ್ಲೆಕ್ಸಿ ಉಳಿತಾಯಖಾತೆ | -- | 48,10,000-00 |
| ಸ್ತ್ರೀಶಕ್ತಿ ಮುದ್ದತಿ ಠೇವು | -- | 1,58,94,748-00 |
| ಅಂತೂ.. | **94,31,57,393-08** | **102,79,21,343-75** |

## ಶೆಡ್ಯೂಲ್ 04 : ಬ್ಯಾಂಕ್ ಸಾಲಗಳು

| ವಿವರ | 2020-21 | 2021-22 |
|---|---|---|
| ಕೆ.ಡಿ.ಸಿ.ಸಿ. ಕ್ಯಾಶ್ ಕ್ರೆಡಿಟ್ ಸಾಲ | 28-00 | 15-00 |
| ವಿಕಾಸ ಬ್ಯಾಂಕ್ ಓಡಿಡಿಎಲ್ | 50,00,000-00 | 50-00 |
| ಅಂತೂ.. | **50,00,028-00** | **65-00** |

## ಶೆಡ್ಯೂಲ್ 05 : ಕೊಡತಕ್ಕ ಬಾಬ್ತುಗಳು

| ವಿವರ | 2020-21 | 2021-22 |
|---|---|---|
| ಕೊಡತಕ್ಕ ಬಡ್ಡಿ | 1,65,14,409-00 | 1,36,82,293-00 |
| ಕೊಡತಕ್ಕ ಡಿವಿಡೆಂಡ್ | 1,58,266-00 | 1,57,813-00 |
| ಅಡಿಟ್ ಫೀ ಅನುವು | -- | 2,50,000-00 |
| ಶೇರು ಅಮಾನತ | 29,305-00 | 28,705-00 |
| ನೌಕರರ ವಿಮೆ | 23,946-00 | 25,195-00 |
| ಠೇವು ಅಮಾನತ್ | -- | 14,71,430-00 |
| ಅಮಾನತ್ ಖಾತೆ | -- | 15,578-00 |
| ಕೊಡತಕ್ಕ ಜಿ. ಎಸ್. ಟಿ. | 1,53,731-28 | 1,61,172-50 |
| ಕೊಡತಕ್ಕ ರಿಕವರಿ ವೆಚ್ಚ | -- | -- |
| ಸಿಬ್ಬಂದಿ ವೃತ್ತಿತೆರಿಗೆ | 6,400-00 | 7,000-00 |
| ಮಾರಾಟಾಧಿಕಾರಿಗಳ ಅಮಾನತ್ ಖಾತೆ | 3,75,000-00 | -- |
| ಆದಾಯತೆರಿಗೆ ಅನುವು | 1,72,61,057-28 | 15,00,000-00 |
| ಅಂತೂ.. | **1,72,61,057-28** | **1,72,99,186-50** |

## ಶೆಡ್ಯೂಲ್ 06 : ಪ್ರಶಸ್ತಿಗಳು

| ವಿವರ | 2020-21 | 2021-22 |
|---|---|---|
| ಸಹಕಾರಿ ಪ್ರಶಸ್ತಿ (2012-13) | 5,001-00 | 5,001-00 |
| ಸಹಕಾರಿ ಪ್ರಶಸ್ತಿ (2013-14) | 5,001-00 | 5,001-00 |
| ಅಂತೂ.. | **10,002-00** | **10,002-00** |

## ಶೆಡ್ಯೂಲ್ 07 : ಬ್ಯಾಂಕಿನಲ್ಲಿ ಶಿಲ್ಕು

| ವಿವರ | 2020-21 | 2021-22 |
|---|---|---|
| ಕೆ. ಡಿ .ಸಿ. ಸಿ. ಬ್ಯಾಂಕ್ ಚಾಲ್ತಿ ಖಾತೆ ಯಲ್ಲಾಪುರ | 25,90,886-64 | 19,50,868-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಗುಳ್ಳಾಪುರ ಶಾಖೆ | 7,985-00 | 2,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಗೋಕರ್ಣ ಶಾಖೆ | 2,000-00 | 10,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಕುಮಟಾ ಶಾಖೆ | 1,90,000-00 | 57,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಶಿರಸಿ ಶಾಖೆ | 14,479-00 | 29,985-48 |
| ಕೆ. ಡಿ. ಸಿ. ಸಿ. ಬ್ಯಾಂಕ್ ಸಿದ್ದಾಪುರ ಶಾಖೆ | 10,000-00 | 10,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ದಾಂಡೇಲಿ ಶಾಖೆ | 5,000-00 | 2,05,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಹೊನ್ನಾವರ ಶಾಖೆ | 60,785-00 | 20,000-00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಮುಂಡಗೋಡ ಚಾಲ್ತಿಖಾತೆ | 2,485-00 | 19,364-00 |
| ಎಸ್. ಬಿ. ಐ. ಯಲ್ಲಾಪುರ ಚಾಲ್ತಿ ಖಾತೆ | 9,00,000-69 | 50,000-00 |
| ವಿಕಾಸ ಅರ್ಬನ್ ಬ್ಯಾಂಕ್ ಯಲ್ಲಾಪುರ ಚಾಲ್ತಿ ಖಾತೆ | 15,00,000-70 | 2,75,000-70 |
| ವಿಕಾಸ ಅರ್ಬನ್ ಬ್ಯಾಂಕ್ ಶಿರಸಿ ಚಾಲ್ತಿ ಖಾತೆ | 24,255-00 | 17,074-00 |
| ಸಿಂಡಿಕೇಟ್ ಬ್ಯಾಂಕ್ ಗೋಕರ್ಣ ಚಾಲ್ತಿ ಖಾತೆ | 3,153-44 | 20,000-31 |
| ರಾಮನಗುಳಿ ಸೇವಾ ಸಹಕಾರಿ ಸಂಘ ಎಸ್. ಬಿ. ಖಾತೆ | 800-00 | -- |
| ಎಸ್. ಬಿ. ಐ. ಗೋಕರ್ಣ ಚಾಲ್ತಿ ಖಾತೆ | 1,00,000-00 | -- |
| ಎಸ್. ಬಿ. ಐ. ದಾಂಡೇಲಿ ಚಾಲ್ತಿ ಖಾತೆ | 10,000-00 | 1,44,500-00 |
| ಎಸ್. ಬಿ. ಐ. ಸಿದ್ದಾಪುರ ಚಾಲ್ತಿ ಖಾತೆ | 21,470-00 | 10,000-00 |
| ಕೊಟಕ್ ಮಹಿಂದ್ರಾ ಬ್ಯಾಂಕ್ ಚಾಲ್ತಿ ಖಾತೆ | 19,731-00 | 19,731-00 |
| ಎಸ್. ಬಿ. ಐ. ಯಲ್ಲಾಪುರ ಚಾಲ್ತಿ ಖಾತೆ | 35,000-00 | 10,000-00 |
| ಎಸ್. ಬಿ. ಐ. ಯಲ್ಲಾಪುರ (ಗುಳ್ಳಾಪುರ) | 10,000-00 | 25,000-00 |
| ಎಸ್. ಬಿ. ಐ. ಶಿರಸಿ ಚಾಲ್ತಿ ಖಾತೆ | 3,15,263-96 | 3,19,215-83 |
| ಐ. ಡಿ. ಬಿ. ಐ. ಬ್ಯಾಂಕ್ ಶಿರಸಿ | 44,370-00 | 66,751-00 |
| ಬ್ಯಾಂಕ್ ಆಫ್ ಬರೋಡ ಯಲ್ಲಾಪುರ | 1,09,500-14 | 4,15,000-00 |
| ಲಕ್ಷ್ಮೀ ವಿಲಾಸ ಬ್ಯಾಂಕ್ ಶಿರಸಿ | 78,78,661-55 | 24,82,766-38 |
| ಎಸ್. ಬಿ. ಐ. ಹೊನ್ನಾವರ | 25,000-00 | 28,000-00 |
| ಐ. ಸಿ. ಐ. ಸಿ. ಐ. ಬ್ಯಾಂಕ್ ಕುಮಟಾ ಚಾಲ್ತಿ ಖಾತೆ | 27,78,000-25 | 50,00,000-40 |

| ವಿವರ | 2020–21 | 2021–22 |
|---|---|---|
| ಎಸ್. ಬಿ. ಐ. ಮುಂಡಗೋಡ ಚಾಲ್ತಿ ಖಾತೆ | 10,000–00 | 10,000–00 |
| ಪಿ. ಎಂ. ಸಿ./ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಯಲ್ಲಾಪುರ ಚಾಲ್ತಿಖಾತೆ | 23,67,451–00 | 5,00,005–00 |
| ದಿ ಶಿರಸಿ ಅರ್ಬನ್ ಬ್ಯಾಂಕ್ ಯಲ್ಲಾಪುರ ಚಾಲ್ತಿ ಖಾತೆ | 17,26,656–50 | 12,23,980–00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಕುಮಟಾ ಶಾಖೆ | -- | 3,000–00 |
| ಎಸ್. ಬಿ. ಐ. ಗೋಕರ್ಣ ಚಾಲ್ತಿ ಖಾತೆ 2 | 5,000–00 | 1,00,000–00 |
| ಶಿರಸಿ ಅರ್ಬನ್ ಬ್ಯಾಂಕ್ ಕುಮಟಾ ಚಾಲ್ತಿ ಖಾತೆ | -- | 1,33,000–00 |
| ಅಂತೂ.. | **2,07,67,934–87** | **1,31,57,242–10** |

## ಶೆಡ್ಯೂಲ್ 08 : ಬ್ಯಾಂಕಿನಲ್ಲಿ ಠೇವುಗಳು

| ವಿವರ | 2020–21 | 2021–22 |
|---|---|---|
| ಕೆ. ಡಿ. ಸಿ. ಸಿ. ಬ್ಯಾಂಕ್ ಯಲ್ಲಾಪುರ ಮುದ್ದತಿ ಠೇವು | 7,97,00,000–00 | 7,95,00,000–00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಶೇರು | 22,50,000–00 | 22,50,000–00 |
| ಕಾಯ್ದಿಟ್ಟ ನಿಧಿ | 93,33,584–00 | 1,22,26,074–00 |
| ವಿಕಾಸ ಅರ್ಬನ್ ಬ್ಯಾಂಕ್ ಮುದ್ದತಿ ಠೇವು | 9,50,00,000–00 | 9,50,00,000–00 |
| ಕೆ. ಡಿ. ಸಿ. ಸಿ. ಬ್ಯಾಂಕ್ ಸಾಮಾನ್ಯ ಕ್ಷೇಮ ನಿಧಿ | 15,57,940–00 | 11,56,449–00 |
| ಉತ್ತರಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟ ಶೇರು | 5,000–00 | 5,000–00 |
| ಪಿ. ಎಂ. ಸಿ. ಬ್ಯಾಂಕ್ ಮುದ್ದತಿ ಠೇವು | 7,50,58,301–00 | -- |
| ಅನಿರೀಕ್ಷಿತ ನಷ್ಟನಿಧಿ | 64,73,499–00 | 1,02,43,471–00 |
| ಶಿರಸಿ ಅರ್ಬನ್ ಬ್ಯಾಂಕ್ ಯಲ್ಲಾಪುರ ಮುದ್ದತಿಠೇವು | 7,10,00,000–00 | 9,10,00,000–00 |
| ನೌಕರರ ಕ್ಷೇಮನಿಧಿ [ಕೆಡಿಸಿಸಿ ಬ್ಯಾಂಕ್] | 21,95,422–00 | 21,95,422–00 |
| ಕೆನರಾ ಬ್ಯಾಂಕ್ ಗೋಕರ್ಣ | -- | 20,00,000–00 |
| ಪಿ.ಎಂ.ಸಿ./ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಠೇವು | -- | 7,80,63,280–00 |
| ಅಂತೂ.. | **34,25,73,746–00** | **37,36,39,696–00** |

## ಶೆಡ್ಯೂಲ್ 09 : ಸಾಲ ಮತ್ತು ಮುಂಗಡಗಳು

| ವಿವರ | 2020–21 | 2021–22 |
|---|---|---|
| ಕ್ಯಾಶ್ ಕ್ರೆಡಿಟ್ ಸಾಲ | 15,73,89,288–00 | 20,08,09,910–00 |
| ಠೇವು ಸಾಲ | 2,56,73,987–00 | 2,41,79,925–00 |
| ವಾಹನ ಸಾಲ | 5,49,34,559–00 | 5,78,61,204–00 |
| ಗೃಹ ನಿವೇಶನ ಸಾಲ | 5,14,84,177–00 | 5,87,47,877–00 |
| ಅವಧಿ ಸಾಲ | 26,17,83,642–00 | 25,26,21,820–00 |
| ಜಾಮೀನು ಸಾಲ | 1,49,89,891–00 | 1,49,25,565–00 |
| ಬಂಗಾರ ದಾಗೀನು ಸಾಲ | 1,65,13,263–00 | 2,59,82,569–00 |

| ವಿವರ | 2020–21 | 2021–22 |
|---|---|---|
| ಒಡಿಡಿಎಲ್ ಸಾಲ | 1,36,92,366–00 | 1,70,44,746–00 |
| ಸಿಬ್ಬಂದಿ ಸಾಲ | 23,61,112–00 | 25,62,091–00 |
| ಅಡಮಾನ ಸಾಲ | 11,30,74,082–00 | 11,41,34,595–00 |
| ಅಂತೂ.. | **71,18,96,397–00** | **76,88,70,302–00** |

## ಶೆಡ್ಯೂಲ್ 10 : ಆಸ್ತಿಗಳು

| ವಿವರ | 2020–21 | 2021–22 |
|---|---|---|
| ಫಿಟಿಂಗ್ಸ್ ವ ಫಿಕ್ಚರ್ಸ | 19,11,025–00 | 15,06,690–00 |
| ವಾಹನ ಖಾತೆ | 1,52,595–00 | 2,43,565–00 |
| ಡೆಡ್ ಸ್ಟಾಕ್ | 6,41,921–00 | 7,48,846–00 |
| ಕಂಪ್ಯೂಟರ್ | 6,23,930–00 | 6,63,750–00 |
| ಸಂಘದ ಜಮೀನು | 35,14,500–00 | 83,93,890–00 |
| ಜಮೀನು ಕಂಪೌಂಡ್ | 10–00 | –– |
| ಸಂಘದ ಸ್ವಂತ ಕಟ್ಟಡ | –– | 58,00,805–00 |
| ಅಂತೂ.. | **68,43,981–00** | **1,73,57,546–00** |

## ಶೆಡ್ಯೂಲ್ 11 : ಇತರ ಬರತಕ್ಕ ಬಾಬ್ತುಗಳು

| ವಿವರ | 2020–21 | 2021–22 |
|---|---|---|
| ಟೆಲಿಪೋನ್ ಠೇವು | 8,999–00 | 8,499–00 |
| ಬರತಕ್ಕ ಬ್ಯಾಂಕ್ ಬಡ್ಡಿ | 15,11,854–00 | 18,18,275–00 |
| ಬರತಕ್ಕ ಟಿಡಿಎಸ್ | 9,00,788–81 | 17,41,934–81 |
| ಟಿಕೇಟ್ ಬುಕ್ಕಿಂಗ್ ಖಾತೆ | 1,550–04 | 558–76 |
| ಆದಾಯ ತೆರಿಗೆ ಮುಂಗಡ | 6,00,000–00 | 9,00,000–00 |
| ವಾಹನ ವಿಮೆ | 2,56,754–00 | 1,90,189–00 |
| ಡೆಡ್‌ಸ್ಟಾಕ್ ಅಡ್ವಾನ್ಸ | –– | 1,50,000–00 |
| ಬಾಡಿಗೆ ಭದ್ರತಾ ಠೇವು | 2,50,000–00 | 65,0,000–00 |
| ಸ್ಟಾಂಪ್ ಪೇಪರ್ ಭದ್ರತಾ ಠೇವು | 1,00,000–00 | 1,00,000–00 |
| ಇ–ಸ್ಟಾಂಪಿಂಗ್ ಮುಂಗಡ | 73,362–25 | 1,25,514–30 |
| ಎಚ್. ಡಿ. ಎಫ್. ಸಿ. ವಾಹನ ವಿಮೆ ಮುಂಗಡ | 312–00 | 58,515–00 |
| ಚೆಕ್ ನಗದೀಕರಣ ಖಾತೆ | 14,24,178–00 | –– |
| ಬರತಕ್ಕ ಸಾಲ ಬಾಕಿ | –– | –– |

| ವಿವರ | 2020-21 | 2021-22 |
|---|---|---|
| ಬರತಕ್ಕ ಎ. ಬಿ. ಎನ್. ಫೀ | 1,33,301-00 | 3,31,723-00 |
| ಬರತಕ್ಕ ಅಮಲಜಾರಿ ಫೀ | 2,67,675-00 | 3,61,039-00 |
| ಬರತಕ್ಕ ಜಿ. ಎಸ್. ಟಿ. | 27,145-93 | 58,290-34 |
| ಬರತಕ್ಕ ರಿಕವರಿ ವೆಚ್ಚ | 8,53,103-00 | 5,65,238-00 |
| ಕಂಪ್ಯೂಟರ್ ಸಾಫ್ಟವೇರ್ ಮುಂಗಡ | 4,45,600-00 | 4,60,750-00 |
| ಮುದ್ರಣ ಶಿಲ್ಕು | 2,20,000-00 | 2,64,530-00 |
| ಕಾರ್ಪೋರೇಟ್ ವಿಮಾ ಖಾತೆ | -- | 17,000-00 |
| ವಾಹನಜಪ್ತು ಮುಂಗಡ | 60,000-00 | 60,000-00 |
| ವಯಕ್ತಿಕ ವಿಮೆ | 10,384-00 | 18,305-00 |
| ಅಮಾನತ್ ಖಾತೆ | 9,386-00 | -- |
| ಟಿ. ಡಿ. ಎಸ್. ಖಾತೆ | -- | 26,312-00 |
| ಅಂತೂ.. | **7154393-03** | **79,06,673-21** |

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## -: ಕಳೆದ 5 ವರ್ಷಗಳ ಪ್ರಗತಿ ನೋಟ :-

(ರೂ. ಲಕ್ಷಗಳಲ್ಲಿ)

| ಅ.ನಂ. | ವಿವರ | ವರ್ಷ 2017-18 | ವರ್ಷ 2018-19 | ವರ್ಷ 2019-20 | ವರ್ಷ 2020-21 | ವರ್ಷ 2021-22 |
|---|---|---|---|---|---|---|
| 01. | ಸದಸ್ಯತ್ವ (ಅ ವರ್ಗ) | 9,380 | 11,228 | 13,147 | 15,122 | 16,835 |
| 02. | ಶೇರು ಬಂಡವಾಳ | 411.69 | 446.18 | 525.93 | 549.76 | 567.59 |
| 03. | ಠೇವಣಿಗಳು | 5,894.32 | 7,003.05 | 8,085.90 | 9,431.57 | 10,279.21 |
| 04. | ನೀಡಿದ ಸಾಲ | 5,611.04 | 6,000.34 | 6,253.87 | 6,835.11 | 7,689.47 |
| 05. | ವಸೂಲಿ ಸಾಲ | 4,868.43 | 5,690.37 | 5,416.50 | 6,456.71 | 7,119.73 |
| 06. | ಬಾಕಿ ಇದ್ದ ಸಾಲ | 5,593.22 | 5,903.21 | 6,740.56 | 7,118.96 | 7,688.70 |
| 07. | ಕಟ್ಟಬಾಕಿ ಸಾಲ | 370.03 | 462.72 | 1,043.95 | 1,239.31 | 749.02 |
| 08. | ದುಡಿಯುವ ಬಂಡವಾಳ | 6,825.00 | 8,177.00 | 9,708.23 | 10,680.01 | 11,625.41 |
| 09. | ವಸೂಲಾತಿ ಶೇ.ಪ್ರಮಾಣ | 93.39% | 92.16% | 84.51 | 82.59 | 90.26 |
| 10. | ಅಡಿಟ್ ವರ್ಗೀಕರಣ | 'ಬ' ವರ್ಗ | 'ಅ' ವರ್ಗ | 'ಬ' ವರ್ಗ | 'ಬ' ವರ್ಗ | 'ಬ' ವರ್ಗ |
| 11. | ಗಳಿಸಿದ ನಿಕ್ಕಿಲಾಭ | 63.38 | 65.06 | 15.23 | 115.69 | 72.21 |

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## 2022-23 ನೇ ಸಾಲಿನ ಅಂದಾಜು ಪತ್ರಿಕೆ

(ರೂ. ಲಕ್ಷಗಳಲ್ಲಿ)

| ವೆಚ್ಚದ ವಿವರ | ರಕಂ | ಆದಾಯದ ವಿವರ | |
|---|---|---|---|
| ಕಟ್ಟಡ ಬಾಡಿಗೆ | 20,00,000-00 | ಪ್ರವೇಶ ಫೀ | 65,000-00 |
| ಭವಿಷ್ಯ ನಿಧಿ ವಂತಿಗೆ | 10,00,000-00 | ಫಾರ್ಮ ಫೀ | 3,65,000-00 |
| ತೆರಿಗೆ ಸಲಹಾ ಫೀ | 10,000-00 | ಪರಿಶೀಲನಾ ಶುಲ್ಕ | 26,40,000-00 |
| ವಾರ್ಷಿಕ ಮೀಟಿಂಗ್ ಭತ್ತೆ | 15,000-00 | ಶೇರು ಫೀ | 2,00,000-00 |
| ಆಡಿಟ್ ಫೀ | 2,75,000-00 | ಅಮಲಜಾರಿ ಫೀ (ಸೇಲ್ ಆಫೀಸರ್) | 2,00,000-00 |
| ವೇತನ | 1,00,00,000-00 | ಇ-ಸ್ಟಾಂಪ್ ಸೇವಾ ಶುಲ್ಕ | 1,25,000-00 |
| ಕಂಪ್ಯೂಟರ್ ಎಎಂಸಿ | 20,000-00 | ಕಮೀಶನ | 3,00,000-00 |
| ಚಲನ ಫೀ | 2,000-00 | ಸೇವಾ ಶುಲ್ಕ | 1,50,000-00 |
| ನೌಕರರ ಭತ್ತೆ | 60,000-00 | ಸಾಲ ವಸೂಲಾತಿ ವೆಚ್ಚ | 3,90,000-00 |
| ಇತರೇ | 50,000-00 | ಗುಂತಾವಣೆ ಮೇಲಿನ ಬಡ್ಡಿ | 18,12,00,000-00 |
| ಕಂಪ್ಯೂಟರ ಸರ್ವಿಸ್ ವೆಚ್ಚ | 1,00,000-00 | | |
| ಸಹಕಾರಿಯ ವಿಮಾ ಖಾತೆ | 5,00,000-00 | | |
| ದಿನಕೂಲಿ | 1,50,000-00 | | |
| ಪಿಗ್ಮಿ ಕಮೀಷನ್ | 23,00,000-00 | | |
| ಪೋಸ್ಟೇಜ್ ವ ಟೆಲಿಫೋನ್ | 3,00,000-00 | | |
| ಪ್ರಿಂಟಿಂಗ್ ವ ಸ್ಟೇಶನರಿ | 3,50,000-00 | | |
| ವಿದ್ಯುತ್ ಬಿಲ್ | 2,25,000-00 | | |
| ಸಿಬ್ಬಂದಿ ಸಮವಸ್ತ್ರ ಖಾತೆ | 70,000-00 | | |
| ಸೌಹಾರ್ದ ಫೀ | 60,000-00 | | |
| ಸಂಚಿತ ವೇತನ | 4,25,000-00 | | |
| ಗೌರವ ಧನ | 4,50,000-00 | | |
| ಪ್ರಭಾರಿ ಶಾಖಾ ಭತ್ತೆ | 50,000-00 | | |
| ಬಡ್ಡಿ ರಿಯಾಯತಿ | 10,00,000-00 | | |
| ಕೆಡಿಸಿಸಿ ಬ್ಯಾಂಕ್ | 25,000-00 | | |
| ಜಿಎಸ್‌ಟಿ ವೆಚ್ಚ | 1,65,000-00 | | |
| ಭವಿಷ್ಯ ನಿಧಿ ಆಡಳಿತ ವೆಚ್ಚ | 2,00,000-00 | | |
| ಸಹಕಾರಿ ವೃತ್ತಿ ತೆರಿಗೆ | 25,000-00 | ಮುಂದೆಳೆದ ಬೇರೀಜು... | 18,56,35,000-00 |

(20ನೇ ಪುಟಕ್ಕೆ)

(19ನೇ ಪುಟದಿಂದ)


| ವಿವರ | ರಕಂ | ವಿವರ | ರಕಂ |
|---|---|---|---|
| ಸಿಟ್ಟಿಂಗ್ ಭತ್ತೆ | 1,00,000–00 | ಹಿಂದಿನ ಬೇರೀಜು... | 18,56,35,000–00 |
| ಪ್ರಯಾಣ ಭತ್ತೆ | 1,00,000–00 | | |
| ವಾಹನ ಖಾತೆ ವೆಚ್ಚ | 2,00,000–00 | | |
| ವಾಹನ ಬಾಡಿಗೆ | 75,000–00 | | |
| ವಾಹನ ನಿಲುಗಡೆ ಶುಲ್ಕ | 2,00,000–00 | | |
| ಲೈಸೆನ್ಸ ನವೀಕರಣ | 10,000–00 | | |
| ಸ್ವಾಪ್ಪವೇರ ಮಾಸಿಕ ಶುಲ್ಕ | 8,00,000–00 | | |
| ಆರ್‌ಡಿ ಕಮೀಷನ್ | 60,000–00 | | |
| ಸೌಹಾರ್ದ ಒಕ್ಕೂಟ ಶುಲ್ಕ | 6,000–00 | | |
| ವಕಾಲತ್ ಫೀ | 25,000–00 | | |
| ಕೆಡಿಸಿಸಿ ಬ್ಯಾಂಕ್ ಪ. ಶುಲ್ಕ | 15,000–00 | | |
| ಕೆಡಿಸಿಸಿ ಬ್ಯಾಂಕ್ ಸ್ಟಾಂಪ್ ಡ್ಯೂಟಿ | 2,000–00 | | |
| ಠೇವುಗಳ ಮೇಲಿನ ಬಡ್ಡಿ | 14,40,00,000–00 | | |
| ಲಾಭ | 2,02,15,000–00 | | |
| ಅಂತೂ... | **18,56,35,000–00** | ಅಂತೂ... | **18,56,35,000–00** |

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : ಮಾಲತೇಶ ಆರ್ಕೇಡ್, ಬಸ್‌ಸ್ಟ್ಯಾಂಡ್ ರಸ್ತೆ, ಯಲ್ಲಾಪುರ - 581 359 (ಉ. ಕ.)

## ಠೇವಿನ ಬಡ್ಡಿದರಗಳು

| ಅವಧಿ | ಬಡ್ಡಿದರ |
|---|---|
| 30 ದಿನಗಳಿಂದ 91 ದಿನಗಳವರೆಗೆ | 4.50% |
| 92 ದಿನಗಳಿಂದ 181 ದಿನಗಳವರೆಗೆ | 5.50% |
| 182 ದಿನಗಳಿಂದ 1 ವರ್ಷದ ಒಳಗೆ | 6.50% |
| 1 ವರ್ಷಕ್ಕೆ | 8.00% |
| 1 ವರ್ಷ ಮೇಲ್ಪಟ್ಟು | 7.50% |



ಹಿರಿಯ
ನಾಗರಿಕರಿಗೆ
0.50%
ಹೆಚ್ಚಿನ ಬಡ್ಡಿ
ನೀಡಲಾಗುವುದು.

ಫ್ಲೆಕ್ಸಿ ಉಳಿತಾಯ ಖಾತೆ

ಉಳಿತಾಯ ಖಾತೆ 3%



ಪಿಗ್ಮಿ ಠೇವು : 1 ವರ್ಷ ಹಾಗೂ ಮೇಲ್ಪಟ್ಟು 4%

## ರಿಕರಿಂಗ್ ಠೇವು

| | |
|---|---|
| 1 ವರ್ಷಕ್ಕೆ | 8% |
| 2 ರಿಂದ 3 ವರ್ಷದವರೆಗೆ | 8.50% |





## ಬನ್ನಿ, ನಮ್ಮ ಸಹಕಾರಿ ಕುಟುಂಬದಲ್ಲಿ ಪಾಲ್ಗೊಳ್ಳಿ


**ಶ್ರೀ ಎನ್. ಜಿ. ಕಿರಣ**
ಪ್ರಧಾನ ವ್ಯವಸ್ಥಾಪಕರು
ಹಾಗೂ ಸಿಬ್ಬಂದಿ ವರ್ಗ

**ಶ್ರೀ ಸುಬ್ಬಯ್ಯ ಧೋಗಳೆ**
ಉಪಾಧ್ಯಕ್ಷರು

**ಶ್ರೀ ಪ್ರಮೋದ ಹೆಗಡೆ**
ಅಧ್ಯಕ್ಷರು

ಹಾಗೂ ಆಡಳಿತ ಮಂಡಳಿ ಸದಸ್ಯರು

# ಅಭಿವೃದ್ಧಿ
## ಮತ್ತು
# ಸಮೃದ್ಧಿಗಾಗಿ ಸೇವೆ



ಇಂದ :

**ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ**
ಮಾಲತೇಶ ಆರ್ಕೇಡ್, ಬಸ್‌ಸ್ಟ್ಯಾಂಡ್ ರಸ್ತೆ,
ಯಲ್ಲಾಪುರ (ಉ. ಕ.)

ಚೇತನಾ ಸಹಕಾರಿ ಮುದ್ರಣ, ಶಿರಸಿ, ಫೋನ್ : 227002